Antaranga 95

2-10-80

ಮನೋಪದೇಶ

ವಿನಾಯಕರಾವ್ ಬಾಪಟ

ಅಂತರಂಗ ಕಾರ್ಯಾಲಯ, ಉಡುಪಿ.

0-6-0

ಅಂತರಂಗ

ಸ್ಥಾಪನೆ: ೧೯೩೮

F ೧೩	ಪುಸ್ತಕ ಪತ್ರಿಕೆ, ಉಡುಪಿ	ಪುಸ್ತಕ ೯೫

ಮನೋಪದೇಶ

ವೈದ್ಯ ವಿನಾಯಕರಾವ್ ಬಾಪಟ

ನವಂಬರ, ೧೯೫೧

ಅಂತರಂಗ ಕಾರ್ಯಾಲಯ, ಉಡುಪಿ.

0–6–0



ಯೋಗಿ ಶುಕನಂತೆ ನೀ ವೈರಾಗ್ಯಮೂರ್ತಿ ।
ಯೋಗೀಶ ವಾಸಿಷ್ಟ ಮುನಿಯಂತೆ ಕೀರ್ತಿ ॥
ಕರುಣಿ ವಾಲ್ಮೀಕಿ ಕವಿಹೃದಯದಾವಾಸ ।
ಕರುಣಿಸುದು ನಮಿಸುವೆನು ಶ್ರೀರಾಮದಾಸ ॥

ಪ್ರಸ್ತಾವನೆ

'ಮನೋಪದೇಶ' ಎಂಬ ಈ ಪುಸ್ತಕವು ಮರಾಠಿಭಾಷೆಯ 'ಮನಾಚೆ ಶ್ಲೋಕ' ಎಂಬ ಉಪದೇಶಾಮೃತದ ಸರಳಾನುವಾದ. ಮಹರಾಷ್ಟ್ರದಲ್ಲಿ ಮೂಲಶ್ಲೋಕಗಳನ್ನು ಸಾಮಾನ್ಯವಾಗಿ ಪ್ರತಿಯೊಬ್ಬರ ಬಾಯಿಯಲ್ಲಿಯೂ ಕೇಳಬಹುದು- ಭಿಕ್ಷೆಯನ್ನು ಉಚಿತವಾಗಿ ಸ್ವೀಕರಿಸದೆ, ಅದಕ್ಕೆ ಪ್ರತಿಯಾಗಿ ಗೃಹಸ್ಥರಿಗೆ ಸನ್ಮಾರ್ಗವನ್ನು ತೋರಿಸಬೇಕೆಂಬ ಹಿರಿಯೋದ್ದೇಶದಿಂದ ಶ್ರೀ ಸಮರ್ಥ ರಾಮದಾಸರು ಈ ಪದ್ಯಗಳನ್ನು ರಚಿಸಿದರೆಂದು ತಿಳಿಯುತ್ತದೆ. ಶಿಷ್ಯರು ಭಿಕ್ಷೆಯನ್ನು ಬೇಡಲು ಹೋದಾಗ್ಯೆ ಪ್ರತಿಯೊಂದು ಮನೆಯ ಬಾಗಿಲಿನಲ್ಲಿ ಕೆಲವು ಪದ್ಯಗಳನ್ನು ಹಾಡಿ ಮುಂದೆ ಸಾಗಬೇಕೆಂಬುದು ಅವರ ನಿಯಮವಾಗಿತ್ತು.

ಇನ್ನೊಬ್ಬರಿಗೆ ಉಪದೇಶ ಮಾಡುವುದಕ್ಕಿಂತ ತನಗೆ ತಾನೇ ಉಪದೇಶ ಮಾಡಿಕೊಂಡು, ತನ್ನನ್ನು ಮೊದಲು ತಿದ್ದಿಕೊಳ್ಳಬೇಕೆಂಬುದನ್ನು ಸೂಚಿಸುವುದಕ್ಕಾಗಿ, ಈ ಪದ್ಯದಲ್ಲಿ ಮನಸ್ಸನ್ನು ಸಂಬೋಧಿಸಿ ಉಪದೇಶ ಮಾಡಿದ್ದಾರೆ. ಪ್ರಪಂಚದಲ್ಲಿ ಪ್ರತಿಯೊಬ್ಬರೂ, ತಮ್ಮತಮ್ಮ ವ್ಯವಹಾರಿಕ ಧರ್ಮಗಳನ್ನು ಪಾಲಿಸುತ್ತಾ, ನಿರಂತರವೂ ಶ್ರೀ ರಾಮನನ್ನು ಧ್ಯಾನಿಸುತ್ತಿರಬೇಕೆಂಬುದು ಈ ಉಪದೇಶದ ಸಾರಾಂಶ. ಇದರಲ್ಲಿ ಭಕ್ತಿಮಾರ್ಗಕ್ಕೆ ಪ್ರಾಧಾನ್ಯತೆಯನ್ನು ಕೊಡಲಾಗಿದೆ

ಅನುವಾದದ ಪದ್ಯಗಳು "ದ್ವಿಪದಿ"ಯ ರೂಪದಲ್ಲಿವೆ ಮೂಲದಲ್ಲಿ ಅಲಂಕಾರಕ್ಕಾಗಿಯೂ, ಕೆಲವು ಹಿರಿಯ ಭಾವಗಳನ್ನು ಒತ್ತಿ ಹೇಳುವುದಕ್ಕಾಗಿಯೂ, ಹಲವಾರು ಕಡೆಗಳಲ್ಲಿ ಪದ್ಯದ ಕೊನೆಯ ಚರಣವನ್ನು ಮುಂದಿನ ಕೆಲವು ಪದ್ಯಗಳ ಕೊನೆಯ ಚರಣವನ್ನಾಗಿಡಲಾಗಿದೆ. ಅನುವಾದದಲ್ಲಿ ಸಹ ಇದೇ ಪದ್ಧತಿಯನ್ನು ಅನುಸರಿಸಿರುವುದರಿಂದಲೂ, ಮೂಲದ ಒಂದೊಂದು ಪದ್ಯಗಳ ಭಾವವು ಅನುವಾದದ ಎರಡೆರಡು "ದ್ವಿಪದಿ"ಗಳಲ್ಲಿ ಬಂದಿರುವುದರಿಂದ ಮೂಲದೊಡನೆ ಹೋಲಿಸಿ ನೋಡಬೇಕೆಂಬುವವರಿಗೆ ಅನುಕೂಲವಾಗಲೆಂಬ ಉದ್ದೇಶ

ದಿಂದಲೂ ಎರಡೆರಡು "ದ್ವಿಪದಿ"ಗಳನ್ನು ಸೇರಿಸಿ ಚೌಪದಿಯಂ
ಬರೆಯಲಾಗಿದೆ.

"ಮನಾಚೆ ಶ್ಲೋಕ"ದ ಕನ್ನಡ ಅನುವಾದವೊಂದು ಈಗಾಗಲೆ
ಪ್ರಕಟವಾಗಿದೆ. ಈ ಬೋಧದ ಸರಳತೆ ಮತ್ತು ಶ್ರೇಷ್ಠತೆಯ ದೃಷ್ಟಿ
ಯಿಂದ ಇದು ಪ್ರಸಾರವಾದಷ್ಟೂ ಹಿತಕರ. ಕನ್ನಡ ಭಾಷೆಯ
ಸಾಮಾನ್ಯ ಜ್ಞಾನವಿರುವವರಿಗೆ ಸಹ ಅರ್ಥವಾಗುವಂತೆ ಅನುವಾದಿ
ಪದ್ಯಗಳನ್ನು ಶಕ್ಯವಿದ್ದಷ್ಟು ಸುಲಭ ಶೈಲಿಯಲ್ಲಿ ರಚಿಸಲು ಪ್ರಯತ್ನಿ
ಲಾಗಿದೆ. ಮೂಲದ ಭಾವಕ್ಕೆ ಸ್ವಲ್ಪವೂ ವ್ಯತ್ಯಯ ಬಾರದಂತೆ ಯಥಾ
ಮತಿ ಪ್ರಯತ್ನಿಸಿದ್ದೇನೆ. ಅಲ್ಲಲ್ಲಿಯ ಕೆಲವು ಅಪವಾದಗಳ ಹೊರತಾ
ಅನುವಾದಿತ ಪದ್ಯಗಳ ಪ್ರತಿಯೊಂದು ಚರಣವೂ ಮೂಲಚರಣಗ
ಸರಳಾನುವಾದವಾಗಿರುವುದನ್ನು ಕಾಣಬಹುದು.

ಅನುವಾದಿತ ಪದ್ಯಗಳನ್ನು ತಿದ್ದಲು ನನ್ನ ಹಿರಿಯ ಮಿತ್ರರೂ
ಹಿತೈಷಿಗಳೂ ಆದ ವೇ|| ಮೂ|| ಗಣಪತಿಶಂಕರ ಭಟ್ಟ ಸರ್ಪಕರ್ಣೇಶ್ವ
ಹಾಗೂ ಇನ್ನೂ ಕೆಲವು ಮಿತ್ರರು ಮಾಡಿದ ಸಹಾಯ ಸಲಹೆಗಳಿಗಾ
ಅವರಿಗೆ ಕೃತಜ್ಞನಾಗಿದ್ದೇನೆ.

ದಾಸನಕೊಪ್ಪ,
24—9—1951 }   ವಿನಾಯಕರಾವ್ ಬಾಪಟ



ಮನೋಪದೇಶ

೧ ಗಣಗಳಧಿಪತಿ ನೀನು ನಮಿಸುವೆನು ನಿನಗೆ ।
ಗುಣಗಳನು ಮೀರಿರುವ ಆದಿಪೂಜ್ಯನಿಗೆ ॥
ನಾಕುವಾಣಿಯ ಜನನಿ ಶಾರದೆಗೆ ನಮಿಸಿ ।
ಏಕ ರಾಮನ ಭಕ್ತಿ ಪಥಹಿಡಿವೆ ಬಯಸಿ ॥

೨ ಸನ್ಮನವೆ ಭಕ್ತಿಮಾರ್ಗದಲ್ಲಿ ಚರಿಸುವುದು ।
ತನ್ಮಯದಿ ಚಿನ್ಮಯನ ಸುಲಭ ಕಾಣುವುದು ॥
ನಿಂದ್ಯವಹ ಕರ್ಮಗಳ ಬಿಡಲು ನಿರ್ಧರಿಸು ।
ವಂದ್ಯವಹ ಕರ್ಮಗಳ ಮಾಡೆ ಹಟಧರಿಸು ॥

೩ ಘೋಷಿಪುದು ಬೆಳಗಿನಲಿ ರಾಮನಾಮವನು ।
ಆಶಿಸುತ ಸಂತತವು ನೆನೆಯಬೇಕದನು ॥
ಇದುವೆ ಹಿರಿದಾಚಾರ ಬಿಡಬೇಡವೆಂದೂ ।
ಇದರಿಂದ ಮಾನವನು ಧನ್ಯನೆಂದೆಂದೂ ॥

೪ ದುಷ್ಟವಾಸನೆಯ ಕಾಮನೆ ವಿಹಿತವಲ್ಲ ।
ಎಷ್ಟಾದರೂ ಪಾಪ ಕೆಡೆಯಿರಲು ಸಲ್ಲ ॥
ನೀತಿ ನಿಯಮಗಳಂತೆ ನಿರುತನಡೆ ನೀನ ।
ಪ್ರೀತಿಯಲಿ ಸುವಿಚಾರಗಳ ಮಾಡಲೇನು ॥

೫ ಮನವೆ ಪಾಪಗಳ ಸಂಕಲ್ಪ ಬಿಡಬೇಕು ।
ಕೊನೆತನಕ ಸತ್ಯ ಸಂಕಲ್ಪವಿರಬೇಕು ॥
ಇನಿತು ವಿಷಯಗಳ ಕಲ್ಪನೆ ಬೇಡ ನಿನಗೆ ।
ಜನರು ನಿಂದಿಪರು ನಿನ್ನ ವಿಕಾರದೆಸೆಗೆ ॥

೬ ಬೇಡವೈ ಕೋಪ ನಿನಗಲೆ ಬೇದಕರವು |
ಬೇಡ ಕಾಮವು ಬಹಳ ವೈಕಾರಕರವು ||
ಮನವೆ ಲೋಭವು ನಿನಗೆ ಹಿತವಾದುದಲ್ಲ ।
ತನುಮೋಹ ಮದ ಮತ್ಸರಗಳೆಂದು ಸಲ್ಲ ||

೭ ಶ್ರೇಷ್ಠವಹ ಧೈರ್ಯವನು ನೀನು ಗಳಿಸುವುದು |
ಶ್ರೇಷ್ಠನಾಗೆ ಪರನಿಂದ್ಯೆಗಳ ಸೈರಿಪುದು ||
ಮಾತಿನಲಿ ನಮ್ರತೆಯು ಪ್ರಕಟಿಸಲು ಬೇಕು ।
ರೀತಿಯಲಿ ಜನಪ್ರೀತಿ ಗಳಿಸಲೇ ಬೇಕು ||

೮ ನಾಶವಹ ದೇಹಪತನವು ನಿರುತ ಸತ್ಯ |
ಲೇಸು ಮಾಡಲು ಕೀರ್ತಿಯುಳಿವಂಥ ಕೃತ್ಯ ||
ಬೆಂದು ಗಂಧವ ನೀವ ಚಂದನದ ತೆರದಿ ।
ನೊಂದುನೀ ಪರಸುಖವ ಸಾಧಿಪುದು ಜಗದಿ ||

೯ ಪರದ್ರವ್ಯದಪಹರಣ ಪತನ ಕಾರಣವು |
ಪರಹಿಂಸೆ ಕಡು ಸ್ವಾರ್ಥ ಪಾಪಕಾರಣವು ||
ಕೆಟ್ಟಕರ್ಮದ ಕಸುವು ಕಡೆಗು ಕಾಡಿಪುದು ।
ಇಷ್ಟದಂತಾಗದಿರೆ ಕ್ಲೇಶವಾಗುವುದು ||

೧೦ ರಾಮನಲಿ ಪ್ರೇಮ ದೃಢವಾಗಿ ನೆಲೆಸಿರಲಿ ।
ನೇಮದಲಿ ಖಿನ್ನತೆಯು ನಾಶಹೊಂದಿರಲಿ ||
ವಿವಿಧ ದುಃಖಗಳ ನುಪಕಾರವೆಂದೆಣಿಸು |
ಸುವಿವೇಕಿಯಾಗಿ ನಿಜರೂಪದಲಿ ರಮಿಸು ||

೧೧ ನಿತ್ಯಸುಖಿಯಾದವನು ಜಗದಲ್ಲಿ ಸಿಗನು |
ಅತ್ಯಧಿಕ ಶೋಧಿಸುತ ನೀನರಿವುದಿದನು ||
ಪೂರ್ವಜನ್ಮದ ತನ್ನ ಕರ್ಮಫಲವೆಂತು |
ಓರ್ವನಿಗು ತಪ್ಪದನು ಭೋಗಿಸುವುದಂತು ||

೧೨ ಕೊಡಲು ಬೇಡಾಸ್ಪದವ ದುಃಖಕಿನಿಲೆನಿತು |
ಎಡೆಬೇಡ ಚಿಂತೆ ಶೋಕಂಗಳಿಗೆ ಮರೆತು ||
ದೇಹಬುದ್ಧಿಯ ವಿವೇಕದಿ ಕಳಚಿ ಹಾಕು |
ಮೋಹ ಕಳೆದು ವಿದೇಹ ಸ್ಥಿತಿಗಳಿಸಬೇಕು ||

೧೩ ಹಿಂದೆ ರಾವಣಗಾದ ಗತಿಯೇನು ಹೇಳು |
ಒಂದರ್ಥಗಳಿಗೆಯೊಳು ವೈಭವವು ಹಾಳು ||
ದುಷ್ಟವಾಸನೆಯ ಪಾಡು ನೋಡದೆಂತಿಹುದು |
ಕಷ್ಟವಹ ಮೃತ್ಯುವನ್ನೆಳತರದೆ ಬಿಡದು ||

೧೪ ಕರ್ಮಕನುಗುಣಜನ್ಮ ಪಡೆಯುವುದು ಜೀವ |
ಧರ್ಮಬಾಹಿರನಾಗುವುದು ಬೇಡ ಹೇವ ||
ಶ್ರೇಷ್ಠರೆಂಬರನು ಸಹ ಮೃತ್ಯು ಬಿಡಲಿಲ್ಲ |
ಲೋಷ್ಠದೊಲು ಜನನ ಮರಣಕೆ ಲೆಕ್ಕವಿಲ್ಲ ||

೧೫ ನಂಬುನೀನೀ ಜಗವು ಮೃತ್ಯುಭುವಿಯೆಂದು |
ಇಂಬು ಕೊಡಬೇಡಹಂಕಾರಕೆಂದೆಂದು ||
ಚಿರಜೀವಿ ನೀನೆಂಬುದನು ಮರೆಯಬೇಕು |
ಕರೆಯೆ ಮೃತ್ಯುವು ಬಿಟ್ಟು ಹೊರಡಲೇ ಬೇಕು ||

೧೬ ಒಬ್ಬ ಸಾಯಲಳುವರು ಹಿಂದಕುಳಿದವರು |
ಒಬ್ಬರನು ಸಾವು ಬಿಡದೆಂದು ಮರೆಯುವರು ||
ಆಸೆ ಕೆಡುಕೆಂದು ನೀ ತಿಳಿದು ನಂಬುವುದು |
ಆಸೆಯಲೆ ಜನ್ಮ ಬಿಡದಂತೆ ಬರುತಿಹುದು ||

೧೭ ಮಾಡುವನು ಮನುಜ ಮನದಲಿ ವ್ಯರ್ಥ ಚಿಂತೆ |
ಬೇಡಾದುದೇಬಹುದು ವಿಧಿನಿಯಮದಂತೆ ||
ದುಃಖಸುಖ ಕರ್ಮಕನುಗುಣವೆ ಭೋಗಿಪನು |
ದುಃಖಿಪ ವಿಯೋಗದಲಿ ಮೂಢನೆನಿಸುವನು ||

೧೮ ಮನವೆ ರಾಮನನು ಬಿಟ್ಟಾಶೆ ಪಡಬೇಡ ।
ಮನುಜಕೀರ್ತಿಯು ಹೊಗಳುವಾಯಾಸ ಬೇಡ ॥
ವೇದದಲಿ ವರ್ಣಿಸಿಹ ರಾಮನನು ಹೊಗಳು ।
ಖೇದ ಕಳೆಯುತಲಾಸೆ ಪೂರ್ಣವಾಗುವೊಲು ॥

೧೯ ಸತ್ಯವನು ನೀನೆಂದಿಗೂ ಬಿಡಲುಬೇಡ ।
ಮಿಥ್ಯವನು ಮಂಡಿಸುವ ಮರೆಮಾತು ಬೇಡ ॥
ಮಿಥ್ಯಸತತ ಮಿಥ್ಯವೆಂದರಿತು ನಂಬು ।
ಸತ್ಯವಚನಕ್ಕಿರಲಿ ಬಿಡದಂತೆಯಿಂಬು ॥

೨೦ ಗರ್ಭವಾಸದ ನೋವನೆಂತು ವರ್ಣಿಸಲಿ ।
ಅರ್ಭಕನ ರೂಪು ಸಾಕಿನ್ನು ಬರದಿರಲಿ ॥
ಬಂಧನವ ಬಯಸಿ ಬಲುಬೆಂದ ಬಗೆಹೇಗೆ ।
ಅಂಧನೊಳಧೋಮುಖದಿ ಸಿಲುಕಿದ್ದ ಬೇಗೆ ॥

೨೧ ಕಾಮಿನೀ ಕಾಂಚನದ ಕಾಮಬಿಡಬೇಕು ।
ಭೂಮಿಯಲಿ ಹುಟ್ಟಿ ಸಾಯುವುದಳಿಯಬೇಕು ॥
ಯಾತನೆಯ ಗರ್ಭವಾಸವ ಬಿಡಿಸ ಬೇಕು ।
ರೀತಿಯಲಿ ರಾಮಭೇಟಿಯ ಪಡೆಯಬೇಕು ॥

೨೨ ಸನ್ಮನವೆ ನಿನಗೆ ಹಿತವಾದುದನೆ ಮಾಡು ।
ತನ್ಮಯದಿ ರಾಮನನು ಚಿಂತನೆಯ ಮಾಡು ॥
ಪವನಸುತ ಸ್ವಾಮಿಯ ಸುಗುಣವನ್ನು ಹಾಡು ।
ಭವಬಂಧ ಕಳೆವಂಥ ಶ್ರೀಪತಿಯ ನೋಡು ॥

೨೩ ರಾಮನಲ್ಲದ ಬೇರೆ ಚಿಂತನೆಯ ತ್ಯಜಿಸು ।
ನೇಮವಿಲ್ಲದ ಹರಟೆಸುಖ ಜೀವ ಹೊಲಸು ॥
ಕಾಲಕ್ಷಣಕ್ಷಣದ ಲೆಕ್ಕವ ಮಾಡುತಿಹನು ।
ಕಾಲಪಾಶವ ಬಿಡಿಸೆ ಬೇರಾವನಿಹನು ॥

೨೪ ರಾಮನಲ್ಲದ ಮಾತುಗಳ ಕಷ್ಟವೇಕೆ ।
ಸಾಮಾನ್ಯನಂದದಲ್ಲೊಣ ಹರಟೆಯೇಕೆ ॥
ಅನುದಿನದ ಮಾತಿನಲಿ ರಾಮ ನೆನಪಿರಲಿ ।
ಮನವಿನ್ನಹಂಕಾರವೇ ನಂಟದಿರಲಿ ।

೨೫ ಮನವೆನ್ನ ಬೋಧವನು ಕಡೆಗಣಿಸೆ ಸಲ್ಲ ।
ಅನುಮಾನವಿರೆ ರಾಮ ಕಾಣಬರಲೊಲ್ಲ ॥
ದುಃಖವೋಡುತ್ತ ಬರುವುದು ಸುಖದ ಹಿಂದೆ ।
ದುಃಖಬರೆ ಬರಿಶೂನ್ಯ ಜಗವೆಲ್ಲ ಮುಂದೆ ॥

೨೬ ನಾಶವಹ ದೇಹವನು ರಕ್ಷಿಸಲು ನೀನು ।
ಪಾಶದಲಿ ಕಾಲನದ ಹಿಡಿವುದಿಲ್ಲೇನು ॥
ದಿನವು ರಾಮನ ಚಿಂತಿಸಲು ಕಷ್ಟವೇನು ।
ಮನವೆಭವ ಚಿಂತೆಯುಳಿಯಲ್ಕುಳಿವುದೇನು ॥

೨೭ ಹೇಡಿಯುಂದದಿ ಭವದ ಭೀತಿಯಿರಲೇಕೆ ।
ಪಾಡುವಗೆ ರಾಮನನು ಭವಚಿಂತೆಯೇಕೆ ॥
ಕಾಲಕೋಪದಿ ಬಂದು ಹೆದರಿಸಿದರವನು ।
ಕಾಲನಾಶಕ ರಾಮ ರಕ್ಷಿಸುತ್ತಿಹನು ॥

೨೮ ದೀನನಾಥನು ರಾಮ ಕೋದಂಡಧಾರಿ ॥
ದೀನನಾಗುವನು ಕಂಡರೆ ದಂಡಧಾರಿ ॥
ತಾಪಸಿಗೆ ಸುಖವೀವುದಿದು ಸತ್ಯವಾಣಿ ।
ಉಃ*ಪೇಕ್ಷಿಸನು ರಾಮ ದಾಸಾಭಿಮಾನಿ ॥

೨೯ ಭಕ್ತನಿಗೆ ರಾಮನಾಮವೆ ರಕ್ಷೆಯುಹುದು ।
ಭಕ್ತ ಶತ್ರುವನು ಕೋದಂಡ ದಂಡಿಪುದು ॥
ಆ ಪುರಜನರ ವಿಮಾನದಲೊಯ್ದ ಮಾನಿ ।
ಉಃಪೇಕ್ಷಿಸನು ರಾಮ ದಾಸಾಭಿಮಾನಿ ॥

---

*'ಉ' ಎಂಬ ಅಕ್ಷರವನ್ನು ದೀರ್ಘವಾಗಿ ಉಚ್ಚಾರ ಮಾಡಬೇಕು.

೩೦ ಸಿರಿವಂತ ಸಾಮರ್ಥ್ಯ ಜನಸೇವಕರನು ॥
ಅರಿದುಪೇಕ್ಷಿಸುವತಾ ಜಗದಲ್ಲಿ ಸಿಗನು ||
ಶ್ರೀಪತಿಯ ಹೊಗಳುವುದು ಮೂಲೋಕವಾಣಿ ।
ಉಪೇಕ್ಷಿಕನು ರಾಮ ದಾಸಾಭಿಮಾನಿ ॥

೩೧ ಬಲಶಾಲಿ ಬಲುಗುಣಿಯು ಭಕುತಿಗೊಲಿಯುವನು ।
ಒಲಿದ ಸುಮನಸರ ಬಿಡುಗಡೆಯ ಕಾರಣನು ||
ತಾಪಹರಕಾರ ಜಪಿಪನು ಶೂಲಪಾಣಿ ।
ಉಪೇಕ್ಷಿಸನು ರಾಮ ದಾಸಾಭಿಮಾನಿ ॥

೩೨ ಶಿಲೆಯಾಗಿ ಬಿದ್ದಹಲ್ಯೆಗೆ ಶಾಪಮುಕ್ತಿ ।
ಚೆಲುವ ಪಾದವು ಸೋಂಕಲಾಯಿತದೆ ಶಕ್ತಿ ॥
ರೂಪವರ್ಣಿಸೆ ಸೋತುದಲೆ ವೇದವಾಣಿ ।
ಉಪೇಕ್ಷಿಸನು ರಾಮ ದಾಸಾಭಿಮಾನಿ ॥

೩೩ ಮಂದಾರ ಮೇರು ಪರ್ವತ ಸೃಷ್ಟಿಲೀಲೆ ।
ಚಂದ್ರರವಿ ವಿಸ್ತಾರ ನಕ್ಷತ್ರ ಮಾಲೆ ॥
ವ್ಯಾಪಿಸಿರಲಿಬ್ಬರಿಗೆ *ಚಿರಪದದ ದಾನಿ ।
ಉಪೇಕ್ಷಿಸನು ರಾಮ ದಾಸಾಭಿ ಮಾನಿ ||

೩೪ ರಾಮರೂಪಿನಲುಪೇಕ್ಷೆಯು ಲೇಶವಿಲ್ಲ ||
ಪ್ರೇಮ ವಿಶ್ವಾಸಗಳಿ ನಿತುರ ನರನಿಗಿಲ್ಲ ॥
ಕಾಪುವೆಂಬಗೆ ಯೋಗಕ್ಷೇಮಗಳ ದಾನಿ ।
ಉಪೇಕ್ಷಿಸನು ರಾಮ ದಾಸಾಭಿಮಾನಿ ॥

೩೫ ಭಕ್ತ ಶ್ರೇಷ್ಠರ ಯೋಗ್ಯ ಕಾಮನೆಯ ತಿಳಿದು ।
ಯುಕ್ತಿಯಲಿ ಪೂರ್ಣಗೊಳಿಪನು ತಾನೆ ಬಗೆದು ॥
ಪಾಪಿ ಪೊಗಳಲು ಪ್ರೇಮದಲಿ ಚಾಪ ಪಾಣಿ ।
ಉಪೇಕ್ಷಿಸನು ರಾಮ ದಾಸಾಭಿ ಮಾನಿ ॥

---

*ಹನುಮಂತ ಮತ್ತು ವಿಭೀಷಣ

೩೬ ನಿತ್ಯ ದೇವ ಸನಿಹದಲಿದ್ಧರೂ ಅವನು |
ಸ್ತುತ್ಯ ಭಜಕರನು ಬಹು ಪರಿಕಿಸುತ್ತಿಹನು ||
ತಾಪರಿ ಪರಿಯೊಳಾನಂದ ಮೋಕ್ಷ ದಾನಿ |
ಉಪೇಕ್ಷಿಸನು ರಾಮ ದಾಸಾಭಿ ಮಾನಿ ||

೩೭ ಚಕ್ರವಾಕದ ವಿರಹ ಕಾದಿತ್ಯ ಹೇಗೆ |
ಚಕ್ರಪಾಣಿಯು ಭಕ್ತಕಷ್ಟಕ್ಕೆ ಹಾಗೆ ||
ಆ ಪುಣ್ಯ ಭಕ್ತ ಸಾರುವ ಹರಿಯ ವಾಣಿ |
ಉಪೇಕ್ಷಿಸನು ರಾಮ ದಾಸಾಭಿ ಮಾನಿ ||

೩೮ ಸನ್ಮನವೆ ನೀನೆನ್ನ ಪ್ರಾರ್ಥನೆಯ ಕೇಳು |
ತನ್ಮಯದಿ ರಾಮ ಧ್ಯಾನವ ಮಾಡಿ ಹೇಳು ||
ಪ್ರೇಮ ನುಡಿಯಲ್ಲುಪೇಕ್ಷೆಯನೇನುಪಡದೆ |
ರಾಮ ರೂಪದಿ ಲೀನವಾಗುವುದು ಬಿಡದೆ ||

೩೯ ಆರನಾಮವ ವೇದ ಶಾಸ್ತ್ರ ಹೊಗಳುವದೊ |
ಆರ ಯೋಗದಿ ಸಮಾಧಾನ ದೊರೆಯುವುದೊ ||
ಹೋಮ ಮಾಡಲ್ಲಿ ಚಾಂಚಲ್ಯವನು ಕ್ರಮದೆ |
ರಾಮ ರೂಪದಿ ಲೀನವಾಗುವುದು ಬಿಡದೆ ||

೪೦ ಮನವೆ ನೋಡೆಲ್ಲಿ ಸುಖದಾವಾಸ ವೆಂದು |
ಕೊನೆಗಲ್ಲಿಯೇ ಲಕ್ಷ್ಯ ನಿಲಿ ಸೆಳೆದು ತಂದು ||
ಕಾಮ ಕಲ್ಪನೆ ವಿವೇಕದೊಳು ಬರ ಗೊಡದೆ |
ರಾಮ ರೂಪದಿ ಲೀನವಾಗುವುದು ಬಿಡದೆ ||

೪೧ ಮನವೆ ಸ್ವೈರದಲಲೆಯೆ ಸೌಖ್ಯಸಿಗಲೊಲ್ಲ |
ತನುವಿಗಾಯಾಸವಲ್ಲದೆ ಲಾಭವಿಲ್ಲ ||
ಪ್ರೇಮದಿಂದಂತರಂಗಕೆ ತಿಳಿಸಿಕ್ರಮದೆ |
ರಾಮರೂಪದಿ ಲೀನವಾಗುವುದು ಬಿಡದೆ ||

೪೨ ಹೆಚ್ಚು ಹೇಳಿದರೆ ಸತ್ಯವು ತಿಳಿವುದೇನು ।
ನೆಚ್ಚಿನಾಮದಿ ನಿರುತ ನಿಂತುಬಿಡು ನೀನು ॥
ನೇಮದಲಿ ನಲಿಸುವನು ನಂಬೆನೀ ನಯದೆ ।
ರಾಮ ರೂಪದಿ ಲೀನವಾಗುವುದು ಬಿಡದೆ ॥

೪೩ ಪ್ರೀತಿಯಿಂದಾಲಿಸುವುದಾಪ್ತ ವಾಕ್ಯವನು ॥
ರೀತಿಯಲಿ ಸಾಧಿಸುವುದಾತ್ಮ ಜ್ಞಾನವನು ॥
ರಾಮನಲ್ಲದ ಮಾತ ವ್ಯರ್ಥನುಡಿ ಬೇಡ ।
ನೇಮದಲಿ ನಿಜಧ್ಯಾಸ ಹೊಂದದಿರಬೇಡ ॥

೪೪ ತುಚ್ಛವಹ ಹರಟೆಗಿಂತಲು ಲೇಸು ಮೌನ ।
ಸ್ವಚ್ಛ ಮನದಲಿ ಮಾಡು ರಾಮ ಕಥೆಧ್ಯಾನ ॥
ರಾಮನರಿ ವಿರದ ಬಾಳದು ಕೇಡು ನೋಡು ।
ಪ್ರೇಮ ಮಯ ವನವಾಸ ಬಹು ಲೇಸು ನೋಡು ॥

೪೫ ಯಾರ ಜೊತೆಯಲ್ಲಿರೆ ಸಮಾಧಾನ ನಾಶ ।
ಯಾರ ಜೊತೆಗಿರಲಹಂಕಾರ ದಾವೇಶ ॥
ಇಂತ ಜನತೆಯಲಿ ನಿನಗೇಕೆ ಪ್ರೀತಿ ।
ಸಂತತವು ರಾಮನನು ಧ್ಯಾನಿಪುದೆ ರೀತಿ ॥

೪೬ ಚಿಂತಿಸದೆ ರಾಮನನು ಕಳೆದಂಥ ವೇಳೆ ।
ಸಂತೆ ಗೊಂದಲದಂತೆ ಬಹು ವ್ಯರ್ಥ ಕೇಳೆ ॥
ರಾಮನನು ಮರೆತು ನೀಬರಿಶ್ರಮವ ಪಟ್ಟೆ ।
ರಾಮ ಪಾದದಲಿ ನಿಲ್ಲುವುದಿನ್ನು ಗಟ್ಟಿ ॥

೪೭ ನರಹರಿಯ ನಾಮನೆಲ್ಲೆಡೆಗೆ ನೋಡುವನೋ ।
ನಿರುತಜ್ಞಾನವ ಗಳಿಸಿ ಭಕ್ತನಂತಿಹನೋ ॥
ಸಗುಣ ಭಜನೆಯಲಾರ ಮನ ನಿತ್ಯವಾಸ ॥
ಜಗದಲ್ಲಿ ಬಲುಧನ್ಯ ನಾರಾಮ ದಾಸ ॥

೪೮ ದೇವ ಕಾರ್ಯಕೆ ದೇಹ ದಂಡಿಪನೆ ದಾಸ ।
ದೇವ ಧ್ಯಾನದಿ ಯಾರ ಮನನಿತ್ಯ ವಾಸ ॥
ಸುಗುಣನಿಗೆ ಧರ್ಮ ಪಾಲನೆಯು ವಿಶ್ವಾಸ ।
ಜಗದಲ್ಲಿ ಬಲುಧನ್ಯನಾರಾಮ ದಾಸ ॥

೪೯ ಮಾತು ಮನದಂತೆಯೇ ಮಮತೆ ನಡೆಬೇಕು ।
ಸೀತೆಯರಸನನೇಕದಲಿ ಕಾಣಬೇಕು ॥
ಸಗುಣ ಪೂಜಕಗಹುದು ಭ್ರಮಪೂರ್ಣನಾಶ ।
ಜಗದಲ್ಲಿ ಬಲುಧನ್ಯನಾ ರಾಮದಾಸ ॥

೫೦ ಕಾಮವಿಕಾರಗಳನವನು ದಮನ ಮಾಡಿಹನು ।
ಬ್ರಹ್ಮಚಾರಿಯು ಉದಾಸೀನ ತಾಪಸನು ।
ನಗುತ ಕಳೆದಿಹನುತಮವಿರದಂತೆ ಲೇಶ ।
ಜಗದಲ್ಲಿ ಬಲುಧನ್ಯನಾರಾಮ ದಾಸ ॥

೫೧ ಸ್ವಾರ್ಥಮದ ಮತ್ಸರಗಳನ್ನು ಬಿಟ್ಟಿಹನು ।
ಪಾರ್ಥಿವ ಜಗದುಪಾಧಿಗಳನು ತ್ಯಜಿಸಿಹನು ॥
ಸೊಗಸವನ ಮಾತು ಸವಿವಿನಯ ದಾವಾಸ ।
ಜಗದಲ್ಲಿ ಬಲು ಧನ್ಯನಾರಾಮದಾಸ ॥

೫೨ ತತ್ವ ಚಿಂತೆಯುಲವನು ವೇಳೆ ವ್ಯಯಿಸುವನು ।
ಸತ್ವರದಿ ದಂಭವಾದಕೆ ದೂರನವನು ॥
ನಿಗಮಸಾರವ ತಿಳಿಯೆ ಸಂವಾದ ದಾಶ ।
ಜಗದಲ್ಲಿ ಬಲು ಧನ್ಯನಾರಾಮದಾಸ ॥

೫೩ ಸರಳತನದಲಿ ಜನಪ್ರೀತಿ ಗಳಿಸಿಹನು ।
ವರಸತ್ಯ ನುಡಿಯುತ ವಿವೇಕಿಯಾಗಿಹನು ।
ಸುಗುಣಿಗಿಲ್ಲವ ಸತ್ಯವಾಚನವು ಲೇಶ ।
ಜಗದಲ್ಲಿ ಬಲುಧನ್ಯನಾರಾಮದಾಸ ॥

೫೪ ಚರಿಸುವನು ಕಾನನದಿ ತಾರುಣ್ಯದಲ್ಲಿ ।
ಇರಲೊಪ್ಪನವ ವಿಷಯ ಚಿಂತನೆಗಳಲ್ಲಿ ॥
ಬಗೆಯ ನಿರ್ಧರವು ದೃಢತರ ತೋರಲಾಶ ।
ಜಗದಲ್ಲಿ ಬಲುಧನ್ಯನಾರಾಮದಾಸ ॥

೫೫ ಮನದಿ ದುಷ್ಟದುರಾಶೆ ಸ್ವಾರ್ಥಕೆಡೆಯಿಲ್ಲ ।
ಮನಕೀಶಪ್ರೇಮ ದಾವೇಶ ಬಿಡಲೊಲ್ಲ ॥
ನಗೆಮೊಗದ ಭಕ್ತನಿಗೆ ಋಣಿ ತಾನು ಮೇಶ ।
ಜಗದಲ್ಲಿ ಬಲುಧನ್ಯನಾರಾಮದಾಸ ॥

೫೬ ದೀನರೊಳು ದಯೆಯು ತನುಮನದಿ ಕೋಮಲನು ।
ದೀನಸಖನು ಕೃಪಾಳು ದಾಸ ಪಾಲಕನು ॥
ಹಗೆತನವು, ರಾಗ, ತಾಪಗಳಿಲ್ಲ ಲೇಶ ।
ಜಗದಲ್ಲಿ ಬಲುಧನ್ಯನಾರಾಮದಾಸ ॥

೫೭ ಧನ್ಯನೈ ಮನುಜ ಜಪಿಸಲು ರಾಮ ನಾಮ ।
ಗಣ್ಯಮಾಡಲು ಭಕ್ತ್ಯುಪಾಸನೆಯ ನೇಮ ॥
ಅಹುದುದಾಸೀನತೆಯು ತತ್ವಗಳಸಾರ ।
ಬಹುದು ಸಾಧಿಸೆ ವೃತ್ತಿಬಿಡುಗಡೆಯುತೀರ ॥

೫೮ ಬಿಡುವಿಷಯ ವಾಸನೆಯು ಬಹು ಕರ್ಮರೂಪ ।
ಕೊಡವಿಹಾಕಲು ನರಗೆ ನಾಶಮನ ತಾಪ ॥
ತೋರಿಪುದು ರಾಮನನು ನಿಷ್ಕಾಮ ಪ್ರೇಮ ।
ಪಾರಕಾಣಲಳಿಯಲಿ ಕಲ್ಪನಾ ಕಾಮ ॥

೫೯ ಕಲ್ಪನೆಗಳಲ್ಲಿ ಕಳೆಯಲು ಕಲ್ಪಕೋಟಿ ।
ಸ್ವಲ್ಪಸಹ ಸಿಕ್ಕದದು ಸವಿಶಿವನ ಭೇಟಿ ॥
ಕಾಮ ಕೆಡೆಯಿರುವಲ್ಲಿ ರಾಮತಾನಿಲನು ।
ಕಾಮವನು ಪ್ರೀತಿಸುವ ಗವನೆಂದು ಸಿಗನು ॥

೬೦ ಕಲ್ಪತರು ಧೇನು ಚಿಂತಾಮಣಿಯು ರಾಮು ।
ಸ್ವಲ್ಪ ಭಕ್ತಿಗೊಲಿವನು ಪರಿಪೂರ್ಣಕಾಮು ॥
ಶಿವನಯೋಗದಿ ಸರ್ವಜಗ ಸೃಷ್ಟಿಯುಹುದು ।
ಅವನಯೋಗಕೆ ಸಾಮ್ಯವೆಲ್ಲಿಯೂ ಸಿಗದು ॥

೬೧ ಕಲ್ಪವೃಕ್ಷದ ಬುಡದಿ ದುಃಖಿಸಲು ನೀನು ।
ಕಲ್ಪಿಸಿದ ತೆರದಲ್ಲಿ ದುಃಖಬರದೇನು ॥
ಸಜ್ಜನರ ಕೂಡವಾದವ ಮಾಡೆ ನೀನು ।
ಸಜ್ಜಾಗಿ ದುಃಖಪೀಡಿಪುದಲ್ಲವೇನು ॥

೬೨ ಮನವೆನೀ ನಿಲ್ಲದಿರೆ ನಿಜಧ್ಯಾನದಲ್ಲಿ ।
ಕೊನೆಯಿರದ ಶೋಕ ತಾಪಗಳಳಿವುದೆಲ್ಲಿ ॥
ಭೇದ ವೃತ್ತಿಯೊಳಗಾನಂದ ಸುಖನಾಶ ।
ಖೇದವಿರೆ ಬಹುದೂರ ದೃಢಚಿತ್ತದಾಶ ॥

೬೩ ಕಾಮಧೇನುವಿರೆ ಮಜ್ಜಿಗೆ ಬೇಡಿದಂತೆ ।
ರಾಮಧ್ಯಾನವ ಬಿಟ್ಟು ವಾದಿಸುವ ಚಿಂತೆ ॥
ಕರದಲಿಹ ಚಿಂತಾಮಣಿಯು ದೂರಿ ಮಾರಿ ।
ಬರಿಯಗಾಜನು ಪಡೆದ ಎಲೊ ಮೂರ್ಖಭಾರಿ ॥

೬೪ ಅತಿಬುದ್ಧಿ ಹೀನನಿಗೆ ದೃಢಚಿತ್ತವಿಲ್ಲ ।
ಅತಿಕಾಮಿ ನರಗೆ ರಾಮನ ಚಿಂತೆಯಿಲ್ಲ ॥
ಅತಿ ಲೋಭಿಯಾಗಿರಲು ಶಾಂತಮನವಿಲ್ಲ ।
ಅತಿ ವಿಷಯಿನರಗೆ ದೈನ್ಯತೆ ಬಿಡುವುದಿಲ್ಲ ॥

೬೫ ಭಕ್ತಿಯಿಲ್ಲದ ದೀನವಚನಕೇನರ್ಥ ।
ಮತ್ತೆ ಇಮ್ಮಡಿ ದುಃಖಿಯಾಪಮೂರ್ಖವ್ಯರ್ಥ ॥
ರಾಮನನು ಪ್ರೀತಿಸುತ ಮನವೆ ನೆಲೆನಿಲ್ಲು
ಹೇಮ ಹೆಣ್ಣಾಸಕ್ತಿ ಹರಿದೆಸೆದುಗೆಲ್ಲು ॥

೬೬ ಘೋರ ಸಂಸಾರವಿದು ಬಹು ದುಃಖಮಯವು ।
ಪಾರಕಾಣಲುಬೇಕು ಸತ್ಯಶೋಧನವು ॥
ಒಳಗೆ ವಿಷಯದ ವಿಷವು! ಸುಖದೊರೆವುದೇನು ।
ಬೆಳಗಿನಲಿ ಧ್ಯಾನಿಪುದು ರಾಮನನು ನೀನು ॥

೬೭ ಮೇಘಃಶ್ಯಾಮರಾಮ ಲಾವಣ್ಯರೂಪಿ ।
ಮೇಘ ಗಂಭೀರನ ಪೂರ್ಣಪ್ರತಾಪಿ ॥
ಕಳೆಯುವನು ಭಕ್ತಕಷ್ಟವ ತಿಳಿದು ತಾನು ।
ಬೆಳಗಿನಲಿ ಧ್ಯಾನಿಪುದು ರಾಮನನು ನೀನು ॥

೬೮ ಅತಿಬಲಿಷ್ಠನು ರಾಮಕೋದಂಡಧಾರಿ ।
ಧೃತಿಗೆಟ್ಟು ಧಾವಿಪನು ದಿಟ ದಂಡಧಾರಿ ॥
ಬಳಿಕವನೆದುರು ನರನ ಬೆಲೆಲೆಕ್ಕವೇನು ।
ಬೆಳಗಿನಲಿ ಧ್ಯಾನಿಪುದು ರಾಮನನು ನೀನು ॥

೬೯ ಸುಖದಾಯಕನು ರಾಮ ಭಯನಿವಾರಕನು ।
ಸುಖದಿಂದ ಭಕ್ತನನವರತ ಭಜಿಸುವನು ॥
ತಿಳಿದು ತಪ್ಪನು ತವಕದಲಿ ತಿದ್ದುವೇನು ।
ಬೆಳಗಿನಲಿ ಧ್ಯಾನಿಪುದು ರಾಮನನು ನೀನು ॥

೭೦ ಭಜಿಸು ರಾಮನ ನಾಮಪದೆ ಪೂರ್ಣಕಾಮ ।
ನಿಜಪಾಪಬಾಧಿಸದು ಇಂತಿರಲು ನೇಮ ॥
ಕಳಿತಮದಕವಿದಲಸಕಳೆಯಬೇಕೇನು
ಬೆಳಗಿನಲಿ ಧ್ಯಾನಿಪುದು ರಾಮನನು ನೀನು ॥

೭೧ ಯಾರ ಧ್ಯಾನದಿ ಮಹಾಪಾಪಗಳ ನಾಶ ।
ಯಾರ ಧ್ಯಾನದಿ ಸುಗತಿಲಾಭದಾವಾಸ॥
ಗಳಿಸಿ ಪುಣ್ಯದರಾಶಿ ಸುರಿಸಬೇಕೇನು ।
ಬೆಳಗಿನಲಿ ಧ್ಯಾನಿಪುದು ರಾಮನನು ನೀನು ॥

೭೨ ನಾಮ ಜಪಿಸಲು ಹಣದ ವೆಚ್ಚ ಬೇಕಿಲ್ಲ ।
ಪ್ರೇಮದಿಂದುಚ್ಚರಿಸೆ ಕಷ್ಟವೇನಿಲ್ಲ ॥
ಬೆಳೆದ ಸಂಸಾರವೈರಿಯ ಪರಿವೆಯೇನು ।
ಬೆಳಗಿನಲಿ ಧ್ಯಾನಿಪುದು ರಾಮನನು ನೀನು ॥

೭೩ ದುಡಿಯುವೆನೆ ದೇಹ ದಂಡಿಸಿ ದುಃಖವುಂಟು ।
ಕಡಿಯಲಿಕೆ ದುಃಖವನು ನಾಮಜಪವುಂಟು ॥
ಕೆಳದಿಸಹ ಶಿವನು ಚಿಂತಿಪುದಲ್ಲವೇನು ।
ಬೆಳಗಿನಲಿ ಧ್ಯಾನಿಪುದು ರಾಮನನು ನೀನು ॥

೭೪ ಅತಿಕಷ್ಟ ಪಡಬೇಕು ಹಟಯೋಗದಲ್ಲಿ ।
ಅತಿಧನದ ವ್ಯಯವುಂಟು ವ್ರತದಾನದಲ್ಲಿ ॥
ನಳಿನನಾಭನ ನೆನೆಯುವಗೆ ನಷ್ಟವೇನು ।
ಬೆಳಗಿನಲಿ ಧ್ಯಾನಿಪುದು ರಾಮನನು ನೀನು ॥

೭೫ ಸಕಲ ಶಾಸ್ತ್ರದಸಾರ ಶ್ರೀ ರಾಮ ಧ್ಯಾನ ।
ಯುಕುತಿಯಲಿ ಹುಡುಕಿ ತಿಳಿಧರಿಸಿ ನೀಮೌನ ॥
ಉಳಿಯದಲೆ ಸಂಶಯ ಗಳಳಿಯ ಬೇಕೇನು ।
ಬೆಳಗಿನಲಿ ಧ್ಯಾನಿಪುದು ರಾಮನನು ನೀನು ॥

೭೬ ಯೋಗ ಕರ್ಮಾದಿಯೊಳು ಮನಸಿಲ್ಲಲಿಲ್ಲ ॥
ಭೋಗತ್ಯಾಗವ ಪೂರ್ಣಿಸುವ ಶಕ್ತಿಯಿಲ್ಲ ॥
ಕಳೆಯೆಮನ ಕಲ್ಮಷವನೀ ಬಯಸುವೇನು ।
ಬೆಳಗಿನಲಿ ಧ್ಯಾನಿಪುದು ರಾಮನನು ನೀನು ॥

೭೭ ರಾಮ ಕಾಮುಗೆ ಲಭ್ಯನಿಷ್ಕಾಮ ಬುದ್ಧಿ ।
ನೇಮದಲಿ ಗಳಿಸುವನು ರಾಮಮಯ ಸಿದ್ಧಿ ॥
ಹರಿಯ ಹೊಂದಲು ಬೇಕು ಹದನಾದ ಪ್ರೇಮ ।
ಹರಿಯುವುದು ದ್ವಂದ್ವವಿರಿದಗೆಲ್ಲ ಕಾಮ ॥

೭೮ ಆವನಿಗೆ ರಾಮನಲಿ ವಿಶ್ವಾಸವಿಲ್ಲ ।
ಹೇವಭವ ದುಃಖವವನಿಗೆ ತಪ್ಪಲೊಲ್ಲ ॥
ಸ್ವಾಮಿ ರಘುನಾಥ ನತಿಕರುಣಿ ಗುಣವಂತ ।
ನಾಮ ಹರಿಪುದು ದೇಹ ಸಂಸಾರ ಚಿಂತಾ ॥

೭೯ ಮನವೇ ಶ್ರೀ ರಾಮನಲಿ ಭಾವನೆಯ ಹೊಂದು ।
ನಿನಗೆ ಬೇಡವೊ ಭವದಚಿಂತೆ ಯೆಂದೆಂದೂ ॥
ಚಿಂತೆಬುದ್ಧಿಯನನು ದಿನವು ಭ್ರಮಿಸುವುದು ।
ಸಂತೆಯಲಿ ದರ್ಶನವು ಮಾಯವಾಗುವುದು ॥

೮೦ ಶಿವನಂತೆ ಹೃದಯದಲಿ ರಾಮನನು ನಿಲಿಸು ।
ಭವಲೋಕ ಪಾರನನ್ನೆಡ ಬಿಡದೆಸ್ಮರಿಸು ॥
ದುರ್ಭರ ದುದರ ಪೂರಣದ ಚಿಂತೆ ಬೇಡ ।
ಬರ್ಬರದ ಮತ್ಸರವು ಮನಕೇನು ಬೇಡ ॥

೮೧ ಮತ್ಸರದಿ ಬಿಡಬೇಡ ಶ್ರೀರಾಮಧ್ಯಾನ ।
ಉತ್ಸುಕದಿ ಸಾಧಕನು ಧ್ಯಾನದಲಿ ಲೀನ ॥
ಸಾಧನಂಗಳಸಾರವದು ನಾಮಧ್ಯಾನ ।
ಬೋಧಿಸಲು ಕಾಣದೈ ಬೇರೆಯುಪಮಾನ ॥

೮೨ ವಿವಿಧ ಮಂತ್ರಗಳೊಳು ಹಿರಿದು ರಾಮನಾಮ ।
ಅವಿವೇಕಿ ಭೇದ ತಿಳಿಯನು ಲೋಷ್ಠಹೇಮ ॥
ಹರದಾಹ ಶಮನಕ್ಕೆ ಸೇವಿಸಿದ ನಾಮ ।
ಪರಸಾಧಿಸಲು ಬೇಕು ಬಹು ಶುದ್ಧ ಪ್ರೇಮ ॥

೮೩ ಕಾಮನನು ದಹಿಸಿರುವ ಹಿರಿಯೋಗಿ ಶಿವನು ।
ರಾಮನನ್ನುಮೆಯೊಡನೆ ನಿರುತ ಧ್ಯಾನಿಪನು ॥
ಜ್ಞಾನವೈರಾಗ್ಯರೂಪನಿಗಿಂಥ ಪ್ರೇಮ ।
ಮಾನವಗೆ ಬೇಕೆಷ್ಟು ಹರಿಭಕ್ತಿ ನೇಮ ॥

೮೪ ವಿಕ್ಮಲನ ಶಿರದಲ್ಲಿ ನೆಲೆನಿಂತ ಶಿವನು ।
ಎಷ್ಟುಪರಿ ರಾಮಧ್ಯಾನವ ಮಾಡುತಿಹನು ॥
ಇಂದುಧರನಿಗೆ ವಿಷದ ತಾಪವಳಿಸಿಹುದು ।
ಕುಂದಿರದ ಮುಕ್ತಿಯನು ನರಗೆ ಕೊಡುತಿಹುದು ॥

೮೫ ಯೋಗೇಶ್ವರನ ಶಾಂತಿಧಾಮವೇ ರಾಮ।
ಯೋಗೇಶಗುಮೆಯ ಸಹ ಭಜಿಸುವುದು ನೇಮ ॥
ಉಗ್ರವಿಷತಾಪದಲು ಶಾಂತಿ ದೊರಕಿಹುದು ।
ಅಗ್ರದಲಿ ಭಕ್ತನಿಗೆ ಮುಕ್ತಿ ಕೊಡುತಿಹುದು ॥

೮೬ ನಾಮ ಭಜನೆಯೊಳು ಸುಖವನ್ನು ಕಾಣುವುದು।
ನೇಮವಿರಲಾನಂದ ಸುಲಭ ದೊರೆಯುವುದು ॥
ಏಕಾಗಿ ಕೆಡುವೆನೀ ಸಂದೇಹದೊಳಗೆ ।
ಶೋಕರಹಿತಾನಂದವಿದೆ ನಂಬಿದವಗೆ ॥

೮೭ ಹರಿಭಕ್ತ ಕಾಮವನು ಸಹ ಜಯಿಸುವನು ।
ಸರುವ ಸಂಕಟದಲ್ಲಿ ಸುಖವ ಸವಿಯುವನು ॥
ಧೀರನಂತೆಯೆ ಮನದಭೀಷ್ಟ ಪಡೆಯುವನು ।
ಮಾರುತಿಯು ಜಗತಿದರ ಸಾಕ್ಷಿಯಾಗಿಹನು ॥

೮೮ ಬಲುಸೊಗಸು ಭಜಿಸಲ್ಕೆ ಶ್ರೀರಾಮನಾಮ ।
ಸುಲಭ ಕಳೆಯುವುದಕ್ಕೆ ಮನಗರ್ವಕಾಮ ॥
ಜನನ ಮರಣದ ಬಂಧ ಬೇಗ ಬಿಡಿಸುವುದು ।
ಮನುಜನಿಗೆ ಮೋಕ್ಷ ಸುಖಲಾಭ ನೀಡುವುದು ॥

೮೯ ಭೋಜನದ ಕಾಲದಲಿ ನಾಮಗರ್ಜಿಪುದು ।
ಯೋಜಿಸಿದ ಕಾರ್ಯದಲಿ ನಿರುತ ನೆನೆಯುವುದು ॥
ವಿವಿಧಭೋಗವನು ಹರಿಗಾಗಿ ಭೋಗಿಪುದು ।
ಭುವಿಯಲ್ಲಿ ಹರಿಯನ್ನು ಇಂತು ಸಾಧಿಪುದು ॥

೯೦ ರಾಮನನು ನಂಬುನರ ಜನ್ಮದಲಿ ಪ್ರಾಣಿ |
ನೇಮದಲಿ ಭಜಿಸದಿರೆ ಬಲುದೊಡ್ಡ ಹಾನಿ ||
ಹರಿಮಹಿಮೆಯನ್ನು ವೇದ ಪುರಾಣದಲ್ಲಿ |
ಪರಿವಿಧದಿ ಹಾಡಿಹನು ವ್ಯಾಸನೋಡಲ್ಲಿ ||

೯೧ ರಾಮಧ್ಯಾನವು ವ್ಯರ್ಥವೆಂದೆಣಿಸ ಬೇಡ |
ನಾಮವನು ವಾಣಿಯಲಿ ಹಾಡದಿರಬೇಡ ||
ಮುಖದಿ 'ರಾಮಾ' ಎನಲು ವೆಚ್ಚವೇನಿಲ್ಲ |
ಸುಖವೀವ ನಾಮ ಘೋಷವ ಮಾಡಲೆಲ್ಲ ||

೯೨ ಆದರದಿ ಮಾಡು ರಾಮನ ನಾಮಘೋಷ |
ಆದರಿಸದಿರಲೋಡುವುದು ಸರುವ ದೋಷ ||
ರಾಮನನು ಭಜಿಪಲ್ಲಿ ಹರಿಯು ತೋರುವನು |
ರಾಮನಾಮಕೆ ಶಿವನು ಮಾರಿಹೋಗಿಹನು ||

೯೩ ಭವಕೊಬ್ಬನೇ ದೇವನವನನ್ನ ದಾತಾ |
ಶಿವಗೆ ಜಗಚಿಂತೆಯಾತನೆ ಲೋಕಧಾತಾ ||
ಮುಖದಿ ನಾಮವನುಚ್ಚರಿಸಲೇನು ಕಷ್ಟ |
ಸಖನಂತೆ ಸಲ್ಲಿಪನು ಸರ್ವಸುಖ ಸೃಷ್ಟ ||

೯೪ ಪ್ರಳಯದಲಿ ಮೂಲೋಕ ಸುಡಬಲ್ಲ ಶಿವನು |
ಕಳೆದು ತಾಪವ ಶಾಂತಿಯನು ಭವಿಸುತಿಹನು ||
ಲೋಕಮಂಗಳೆ ಜಪಿಪ ರಾಮನಾಮವನು |
ಏಕೆ ಮರೆವನೊ ಮನುಜ ತಿಳಿಯದಾಗಿಹೆನು ||

೯೫ ಗಾತ್ರ ಬಿಡುತಲಿ ಪುತ್ರನಾರಾಯಣನನು |
ಮಾತ್ರನೆನೆದ ಜಮಿಳ ಮುಕ್ತಿಹೊಂದಿಹನು ||
ಗಿಳಿಯ ನೆವದಲಿ ವೇಶ್ಯೆ ವಿಠ್ಠಲನ ನೆನೆದು |
ಇಳೆಯೊಳಗೆ ಮುಕ್ತಿಪಡೆದಿಹ ಖ್ಯಾತಿಯಿಹುದು ||

೯೬ ದನುಜ ಕುಲದಲಿ ಬಂದ ಭಕ್ತ ಪ್ರಹ್ಲಾದ ।
ಅನುದಿನವು ರಾಮಧ್ಯಾನದಿ ನಿರತನಾದ ॥
ಅವನಪಿತ ಶ್ರೀಪತಿಯ ನಾಮವನು ಹಗೆದು ।
ಭುವಿಯೊಳಪಕೀರ್ತಿಗಳ ಗಳಿಸಿದನು ಬಗೆದು ॥

೯೭ ಮುಖದಲ್ಲಿ ರಾಮ ಎನದಿರೆ ಮುಕ್ತಿ ಹೇಗೆ ।
ಸಖನಹಂಕಾರ ವಿರಿಯಾತನೆಯ ಬೇಗೆ ॥
ಮೃತ್ಯು ಬರುತಿಹುದೋಡಿ ಬೆಂಬತ್ತಿದಂತೆ ।
ನಿತ್ಯರಾಮನ ಭಜಿಸುವವಗೇಕೆ ಚಿಂತೆ ॥

೯೮ ನಾಮಬಲದಿಂದ ಪಾಷಾಣ ತೇಲಿಹುದು. ।
ಭೂಮಿಯಲಿ ಭಕುತರಿಂಗೆ ಬಂಧಕಡಿದಿಹುದು ॥
ಭಜಿಸದಿರೆ ನಾಮವನು ಮದಶಂಕೆಯಿಂದ ।
ತ್ಯಜಿಸುವುದು ಪಾಪಿಜತೆಯನು ಜತನದಿಂದ ॥

೯೯ ತೀರ್ಥಂಗಳಲಿ ಪುಣ್ಯಕಾಶಿ ಬಲುಹಿರಿದು ।
ಯಾತ್ರೆಯಲಿ ಪಿತರಿಂಗೆ ಮೋಕ್ಷಲಭಿಸುವುದು ॥
ನಾಮವುಚ್ಚರಿಸೆ ಮುಖದಲಿ ನಿತ್ಯಕಾಲ ।
ಪಾಮರಗೆ ಹಿತವೆಂದ ಮೂಲೋಕಪಾಲ ॥

೧೦೦ ವೇದಕನು ಗುಣಕರ್ಮವನು ಮಾಡಲಿಲ್ಲ ।
ಸಾಧಿಸಿದ ಕರ್ಮಫಲವೆಂತಾರು ಬಲ್ಲ ॥
ಪ್ರಾಣಿ ಮಾತ್ರದಲಿ ದಯೆಯನು ತೋರಲಿಲ್ಲ ।
ಹಾನಿಹರಣಕೆ ಹರಿಯನೀ ಭಜಿಸಲಿಲ್ಲ ॥

೧೦೧ ನಾಮಭಕ್ತಿಯ ತೊರೆಯೆ ಯಾತನೆಯ ಭೋಗ ।
ವಾಮವಾದಿಗೆ ಕಾದಿಹುದು ನರಕಭಾಗ ॥
ಆದರದಿ ನಾಮವನು ಜಪಿಸು ಮುಖದಿಂದ ।
ಖೇದ ಪಾಪಗಳಳಿದು ಲಭ್ಯಸುಖವೆಂದ ।

೧೦೨ ವಿನಯದಲಿ ಮಾಡು ಲೋಕದ ಸೇವೆಯನ್ನು ।
ದಿನದಿನವುಗಳಿಸು ಸಂತರ ಪ್ರೀತಿಯನ್ನು ॥
ಪರಕಾರ್ಯದಲಿ ದೇಹ ದಂಡಿಸಲು ಬೇಕು ।
ವರಗುಣೋಪಾಸನೆಯ ಸ್ವೀಕರಿಸಬೇಕು ॥

೧೦೩ ಹರಿಯ ಕೀರ್ತನೆಯಲ್ಲಿ ಪ್ರೇಮ ನೆಲೆಸಿರಲಿ ।
ಪರಬೋಧದಲಿ ದೇಹ ಬುದ್ಧಿಯಳಿದಿರಲಿ ॥
ಪರದ್ರವ್ಯ ಪರನಾರಿ ಮೋಹಬರದಿರಲಿ ।
ವರನಾಮ ಸಾಧನೆಯು ಬಿಡದೆನಡೆದಿರಲಿ ॥

೧೦೪ ಬೋಧಿಸಿದ ಪರಿತಾನೆ ನಡೆಯದವ ಮೂರ್ಖ ।
ಶೋಧಿಸುತ ದುರ್ನಡತೆ ತಿದ್ದದವ ಮೂರ್ಖ ॥
ಕಲ್ಪನೆಯ ರಾಜ್ಯದಲಿ ಮುಳುಗಿರಲು ನೀನು ।
ಕಲ್ಪಾಂತ ಕಳೆದರುವೆ ದೇವಸಿಗ ತಾನು ॥

೧೦೫ ತಪ್ಪುನಡತೆಯ ತಿದ್ದು ಸುವಿವೇಕದಿಂದ ।
ಒಪ್ಪಿ ಧರ್ಮದ ಮಾರ್ಗಹಿಡಿ ಪ್ರೀತಿಯಿಂದ ॥
ನುಡಿವಂತೆ ನಿರುತ ನೀನಡೆದು ನೋಡಯ್ಯ ।
ಕಡಿಯುವುದು ಸಂಸಾರ ದುಃಖ ನಿನಗಯ್ಯ ॥

೧೦೬ ನಿಷ್ಠೆಯಿಂದಲೆ ಸ್ನಾನ ಸಂಧ್ಯಾದಿ ನೇಮ ।
ಭ್ರಷ್ಟಮನ ತಿದ್ದಲಿಕೆಸುವಿವೇಕ ನಾಮ ॥
ಸರ್ವತ್ರ ದಯೆತೋರೆ ಕಲಿಯತ್ನದಿಂದ ।
ಸರ್ವಬಗೆ ಶಾಂತಿ ಪ್ರೇಮಳ ನಡತೆಯಿಂದ ॥

೧೦೭ ಸನ್ಮನವೆ ಕೋಪ ಕಾಮ್ಮದ ನಿನಗೆ ಸಲ್ಲ ।
ಸನ್ಮತಿಗಳೊಡಗೂಡಿ ಕಳೆಕಾಲವೆಲ್ಲ ॥
ಪತನಕಾರಣ ದುಷ್ಟ ಸಹವಾಸ ತ್ಯಜಿಸು ।
ಯತನದಲಿ ಮೋಕ್ಷವನು ಸಾಧಿಸಲು ಬಯಸು ॥

೧೦೮ ತಪ್ಪು ಮಾರ್ಗವನು ಬಿಡು ಸತ್ಸಂಗದಿಂದ ।
ಒಪ್ಪ ಮಾರ್ಗವ ಹಿಡಿಯೆ ಲಭ್ಯವಾನಂದ ॥
ಕೃತ್ಯವಿಲ್ಲದ ನುಡಿಯನರ್ಥಗಳ ದಾರಿ ।
ಸತ್ಯತೋರುವ ವಾದ ನಿತ್ಯ ಹಿತಕಾರಿ ॥

೧೦೯ ಪಾಖಂಡವಾದವನು ಬಟ್ಟುಬಿಡು ನೀನು ।
ಸೌಖ್ಯಕರ ಸಂವಾದ ವಿರೆಕೇಳಲೇನು ॥
ತಥ್ಯ ತಿಳಿಸುವವಾದ ಮನದುಃಖಹಾರಿ ।
ಸತ್ಯತೋರುವ ವಾದ ನಿತ್ಯ ಹಿತಕಾರಿ ॥

೧೧೦ ಅಹಮಳಿಸುತ ವಿವೇಕವನು ತರುವ ವಾದ ।
ಇಹದಲ್ಲಿ ಪೆಸರಾಂತ ಸುಖದ ಸಂವಾದ ॥
ನಿತ್ಯ ಹಂಕಾರ ವಾದವು ಖೇದಕಾರಿ ।
ಸತ್ಯತೋರುವ ವಾದ ನಿತ್ಯ ಹಿತಕಾರಿ ॥

೧೧೧ ಹಿತಕಾಗಿ ಹೇಳುವೆನು ಹುದುಗಿರುವ ಸತ್ಯ ।
ಹಿತದ ಹಂಬಲವಿರಲು ಹುಡುಕುವುದು ನಿತ್ಯ ॥
ಸತ್ಯದರ್ಶನಕೆ ಪಾಖಂಡ ನುಡಿಮಾರಿ ।
ಸತ್ಯತೋರವ ವಾದ ನಿತ್ಯ ಹಿತಕಾರಿ ॥

೧೧೨ ಆಗಿ ಹೋಗಿಹರೆಲ್ಲ ಹೇಳಿಕೇಳುವರು ।
ಈಗ ಸಹವಿತಂಡದ ವಾದ ಬಯುಸುವರು ।
ಮಿಥ್ಯ ಜನಿಸುವ ವಾದ ಮನದಂಭ ಕಾರಿ ।
ಸತ್ಯತೋರುವ ವಾದ ನಿತ್ಯ ಹಿತಕಾರಿ ॥

೧೧೩ ಪಂಡಿತರು ಬಹುಮಂದಿ ಹಾನಿಹೊಂದಿಹರು ।
ಮೊಂಡತನದಹಮಿರಲು ಬ್ರಹ್ಮರಾಕ್ಷಸರು ॥
ಶಿವನಂತೆ ಯಾರಿಹರು ಸಂಪೂರ್ಣ ಜ್ಞಾನಿ ।
ಅವನ ಜ್ಞಾನಕೆ ಬೇಕಹಂಕಾರ ಹಾನಿ ॥

೧೧೪ ಮಾತಿನಲಿ ಜ್ಞಾನ ಭೋಧಿಸಲೇನು ಕಷ್ಟ ।
ನೀತಿ ನಡತೆಗಳಿರಲು ಮನಗರ್ವ ನಷ್ಟ ॥
ಮಾತಿಗನುಗುಣ ನಡೆಯದಿರೆ ದೊಡ್ಡ ಹಾನಿ ।
ರೀತಿಯಲಿ ಶೋಧಿಸುತ ನಿನ್ನ ತಿಳಿಪ್ರಾಣಿ ॥

೧೧೫ ಸುವಿವೇಕದಿಂದ ಹಂಕೃತಿ ನಾಶಮಾಡು ।
ಸುವಿವೇಕಿಯೊಡಗೂಡಿ ಸಂವಾದ ಹೂಡು ॥
ನಡೆತೆ ಬೋಧಿಸಿದ ಪರಿಶುದ್ಧವಾಗಿರಲಿ ।
ಅಡಿಗಡಿಗೆ ತಿದ್ದಿ ದೃಢಭಕ್ತಿ ಬೆರತಿರಲಿ ॥

೧೧೬ ದುರ್ವಾಸ ಶಾಪಕಂಬರಿಷ ಹೆದರಿರಲು ।
ಸರ್ವೇಶನೊಪ್ಪಿದನು ಮಗನಾಗಿ ಬರಲು ॥
ಉಪಮನ್ಯುಗೆ ಕ್ಷೀರಸಾಗರದ ದಾನಿ ।
ಉಪೇಕ್ಷಿಸನು ರಾಮ ಭಕ್ತಾಭಿಮಾನಿ ॥

೧೧೭ ಧ್ರುವ ದೈನ್ಯದಲಿ ಶ್ರೀಹರಿಯ ನೆನೆಯುತಿರಲು ।
ಧ್ರುವರೂಪ ತೋರಿದನು ಭೇಟಿಯೊದಗಿಸಲು ॥
ಲೋಪವಾಗದ ಚಿರಪದವನಿತ್ತ ದಾನಿ ।
ಉಪೇಕ್ಷಿಸನು ರಾಮ ಭಕ್ತಾಭಿಮಾನಿ ॥

೧೧೮ ಸಂಕಟದಿ ಭಜಿಸುತಿರಲಂದು ಗಜರಾಜ ।
ವೆಂಕಟೇಶನು ಬಂದ ಸ್ವೀಕರಿಸಿ ಪೂಜ ॥
ಶಾಪ ಕಳೆದನು ಕರುಣದಲಿ ಚಕ್ರಪಾಣಿ ।
ಉಪೇಕ್ಷಿಸನು ರಾಮ ಭಕ್ತಾಭಿಮಾನಿ ॥

೧೧೯ ಅಜಮಿಳನು ಮರಣದಲಿ ಪುತ್ರನೆವದಿಂದ ।
ಅಜಪಿತನ ನೆನೆಯಲ್ಕೆ ಮುಕ್ತಿಭರದಿಂದ ॥
ತಾಪ ನಾಶಕನವನು ಕೋದಂಡ ಪಾಣಿ ।
ಉಪೇಕ್ಷಿಸನು ರಾಮ ಭಕ್ತಾಭಿಮಾನಿ ॥

೧೨೦ ವರಿಸಿದನು ವಿಧಿಗಾಗಿ ಮತ್ಸ್ಯರೂಪವನು ।
ಧರಿಸೆ ಧರಣಿಯ ಕೂರ್ಮರೂಪನಾದವನು ॥
ತಾಪರಿಜನಹಿತಕೆ ಪಡೆದ ನೀಚಯೋನಿ ।
ಉಪೇಕ್ಷಿಸನು ರಾಮ ಭಕ್ತಾಭಿಮಾನಿ ॥

೧೨೧ ಬಹು ಪೀಡೆಯೊಳಗೆ ಹರಿಭಕ್ತ ಪ್ರಹ್ಲಾದ।
ಸಹನದಲಿ ಪ್ರಾರ್ಥಿಸೆ ನೃಸಿಂಹರೂಪಾದ ॥
ರೂಪೋಗ್ರ ಕಂಜನಾನಿಜ ಭಕ್ತಜ್ಞಾನಿ ।
ಉಪೇಕ್ಷಿಸನು ರಾಮ ಭಕ್ತಾಭಿಮಾನಿ ॥

೧೨೨ ಇಂದ್ರಗೊಲಿದವನಂದು ಬಹು ಪ್ರೇಮದಿಂದ ।
ಚಂದ್ರಮುಖಬಂದ ವಾಮನರೂಪದಿಂದ ॥
ಕೋಪಭಾರ್ಗವನಾದ ದ್ವಿಜಹಿತಕೆಜ್ಞಾನಿ ।
ಉಪೇಕ್ಷಿಸನು ರಾಮ ಭಕ್ತಾಭಿಮಾನಿ ॥

೧೨೩ ಕಡಿದಿಹನ ಹಲ್ಯೆಯ ಚಿರಶಾಪವಾಸ ।
ಬಿಡಿಸಿದನು ಸುಮನಸರ ಬಂಧನದಪಾಶ ॥
ಶಾಪಕಳೆಯಲು ರಾವಣನ ಕೊಂದ ಮಾನಿ ।
ಉಪೇಕ್ಷಿಸನು ರಾಮ ಭಕ್ತಾಭಿಮಾನಿ ॥

೧೨೪ ದೀನ ದ್ರೌಪದಿಯದಸಿ ಕೇಳುತಲೆ ಬಂದ ।
ಮಾನವುಳಿಸಲಿ ಕಕ್ಷಯಾಂಬರವತಂದ ॥
ಕಾಪುದಕೆ ಕಲಿಹಿತವ ತಾಬುದ್ಧ ಮಾನಿ ।
ಉಪೇಕ್ಷಿಸನು ರಾಮ ಭಕ್ತಾಭಿಮಾನಿ ॥

೧೨೫ ದೀನ ರಕ್ಷಣೆಗವನು ಜನ್ಮ ತಾಳಿಹನು ।
ಶ್ರೀ ನಾಥ ಜನಹಿತಕೆ ಕಲ್ಕಿಯಾಗುವನು ॥
ಶ್ರೀಪತಿಯ ಹೊಗಳೆ ಸೋತುದು ವೇದವಾಣಿ ।
ಉಪೇಕ್ಷಿಸನು ರಾಮ ಭಕ್ತಾಭಿಮಾನಿ ॥

೧೭ ಭಕ್ತರಕ್ಷಣೆಗವನು ಲೀಲಾವ ತಾರಿ।
ಭಕ್ತಿಗೋಸುಗ ಪ್ರಕಟಬಹು ವೇಷಧಾರಿ॥
ಗುರುತಿಸಲು ಶ್ರಮಿಸದವ ಬಹುಪಾಪ ರೂಪಿ।
ದುರುಳನವ ದುಷ್ಕರ್ಮಿ ದುರ್ದೈವಿ ಪಾಪಿ॥

೧೭ ರಾಮಧ್ಯಾನದ ಸುಖದಲಿರುವವನು ಧನ್ಯ।
ರಾಮ ಕಥೆಯಲಿ ಲೀನನಾದವನೆ ಗಣ್ಯ॥
ರಾಮನಲಿ ದೇಹಭಾವನೆಲಯಿಸಬೇಕು।
ಕಾಮಕನಸುಗಳನ್ನು ಕಳೆಯಲೇ ಬೇಕು॥

೧೮ ಎಲ್ಲವಾಸನೆ ವಾಸುದೇವನಲ್ಲಿರಲಿ।
ಸಲ್ಲಕಾಮವು ನಿನಗೆ ಬಹುದೂರವಿರಲಿ॥
ವಿಷಯ ಕಲ್ಪನೆಯು ಹಿತವಲ್ಲ ನಿನಗಿನಿತೂ।
ವಶನಾಗಿ ಸತ್ಸಂಗ ಮಾಡ ಬೇಕರಿತು॥

೧೯ ಸಜ್ಜನರ ಸಂಗ ಸದ್ಗತಿ ಸಾಧಿಸಲಿಕೆ।
ದುರ್ಜನರ ದುರ್ವೃತ್ತಿ ದೂರ ದೂಡಲಿಕೆ॥
ಕಾಮ ಕನಸುಗಳಿಂದ ಮನಕ್ಷೋಭೆಯಹುದು।
ಕಾಮ ಜಯಿಸುತ ನಿರ್ವಿಕಾರ ನಾಗುವುದು॥

೧೦ ಮಿಥ್ಯಸಂಕಲ್ಪ ಹಿತವಲ್ಲ ತಿಳಿ ನಿನಗೆ।
ಸತ್ಯ ಸಂಕಲ್ಪ ನೆಲಸಲಿ ಚಿತ್ತದೊಳಗೆ॥
ಒಣ ಹರಟೆಯಲ್ಲಿ ನಿಜಲಾಭವೇನಿಲ್ಲ।
ಗೊಣಗದಲೆ ರಾಮನನು ಜಪಿಸ ಬೇಕೆಲ್ಲ॥

೧೧ ಏಕರಾಮನ ನಂಬಿ ಭಜಿಸುವುದು ನಿತ್ಯ
ಏಕಬಾಣೈಕವಚನಿಯು ರಾಮಸತ್ಯ॥
ಅವನು ಕೃತಿಯಲಿ ಲೋಕಕಾದರ್ಶ ರೂಪ।
ಅವನ ಧ್ಯಾನಿಸೆನಾಶ ಸರ್ವಬಗೆ ತಾಪ॥

೧೩೨ ನಡೆ ನುಡಿಗಳೆಲ್ಲ ಬಹುಶುದ್ಧ ವಾಗಿರಲಿ |
ಒಡನಾಡಿಗಳ ಮನದ ತಾಪ ಹರಿಸಿರಲಿ ||
ನುಡಿಯು ಬೇಡೆಲೊ ವಿಚಾರವ ಮಾಡದೇನೂ |
ಬಿಡಬೇಡ ನಡತೆ ಶುದ್ಧತೆಯನ್ನು ನೀನು ||

೧೩೩ ಹರಿಭಕ್ತನತಿ ವಿರಕ್ತ ವಿಜ್ಞಾನ ಮೂರ್ತಿ |
ಹರಿಭಾವದಲ್ಲವಗೆ ನಿಶ್ಚಯದ ಸ್ಫೂರ್ತಿ ||
ಇವನ ದರ್ಶನ ಸ್ಪರ್ಶನವು ಪುಣ್ಯಕಾರಿ |
ಅವನಜೊತೆ ಭಾಷಣೆಯು ಸಂದೇಹ ಹಾರಿ ||

೧೩೪ ಹಮ್ಮುಮನ ದೊಳಗಿಲ್ಲದವ ವೀತರಾಗಿ |
ಕ್ಷಮೆಶಾಂತಿ ದಯೆಯಿರಲ್ಕವ ದಕ್ಷಯೋಗಿ ||
ಮನಕೆ ದೈನ್ಯ ಕ್ರೋಧೆ ಲೋಭಗಳೆ ಇಲ್ಲ |
ಘನವಾದ ಗುಣಗಳಿವು ಯೋಗಿಗಳಿಗೆಲ್ಲ ||

೧೩೫ ಮನವೆ ಮೆಚ್ಚುತ ಮಾಡು ಸಜ್ಜನರ ಸಂಗ |
ದಿನಧಿನವು ದುರ್ಜನರ ದುರ್ವೃತ್ತಿ ಭಂಗ ||
ಸನ್ಮಾರ್ಗ ಸದ್ಬುದ್ಧಿ ಸತತ ಸೂಚುವುದು |
ಸನ್ಮಾರ್ಗಿ ಸಹವಾಸ ಕಾಲ ಶೂಲವದು ||

೧೩೬ ಭಯಭಾರಿ ಭೋರಿಡಲು ಬ್ರಹ್ಮಾಂಡದಲ್ಲಿ |
ಭಯವಳಿದ ಜ್ಞಾನಿಗತ್ಯಾನಂದವಲ್ಲಿ ||
ಅನುಭವಕ್ಕ ದ್ವೈತ ಭಾವ ಕಾಣುವುದು |
ಮನದಲ್ಲಿ ಹುಡುಕೆ ಭಯ ಲೇಶವೂ ಸಿಗದು ||

೧೩೭ ತೋರಿಸಿರೆ ಗುರುವೀಶ ಪ್ರಾಪ್ತಿಬಗೆಯನ್ನು |
ಮೋರೆ ಮುರಿವನು ಮೂಢಮನುಜನವನಿನ್ನು ||
ಹಾನಿಕರ ದೇಹಾತ್ಮ ಬುದ್ಧಿಯಿರಲವಗೆ |
ಜ್ಞಾನನಿಧಿಕಾಣದದು ಮೂಢಬದ್ಧನಿಗೆ ||

೧೪೮ ಧನವ ಹೂತಿಟ್ಟೆಡೆಯು ತಿಳಿಯದಿರೆ ಹೇಗೆ |
ಜನನ ದಾರಿದ್ರ್ಯವಳಿಯುವುದಿಲ್ಲೊ ಹಾಗೆ ||
ಜ್ಞಾನದಲಿ ದೇಹಾತ್ಮದರಿವಳಿವ ವರೆಗೆ |
ಜ್ಞಾನನಿಧಿ ಕಾಣದದು! ಮೂಢಬದ್ಧನಿಗೆ ||

೧೪೯ ಆತ್ಮಧನ ನೋಡು ನಿನ್ನೆದುರಿನಲ್ಲಿಹುದು |
ಆತನನು ಲೋಪ್ಮವೆನಲೇನ ಹೇಳುವುದು ||
ಜ್ಞಾನದಿಂದ ಶ್ರದ್ಧೆ ತೊಳೆದಳಿವ ವರೆಗೆ ।
ಜ್ಞಾನನಿಧಿ ಕಾಣದದು ಮೂಢಬದ್ಧನಿಗೆ ||

೧೫೦ ಮನುಜಗಾತ್ಮಜ್ಞಾನ ಗುಪ್ತಧನವಹುದು ।
ಗುಣಬಂಧವಳಿವನಕ ಮನವೆ ಕಾಣಿಸದು ॥
ಜಾನಿಸಿ ಗುಣಾತೀತನಾಗದಿರಲವಗೆ |
ಜ್ಞಾನನಿಧಿ ಕಾಣದದು ಮೂಢಬದ್ಧನಿಗೆ ||

೧೫೧ ತನುಭಾವಕಳೆದು ಗುರುದಾಸನಾಗುವುದು ।
ವಿನಯದಲಿ ಪಾದಸೇವೆಯನೆ ಮಾಡುವುದು ॥
ಜ್ಞಾನಿಗುರುವಿನ ಕೃಪಾಂಜನ ಬೀಳ್ವವರೆಗೆ |
ಜ್ಞಾನನಿಧಿ ಕಾಣದದು ಮೂಢಬದ್ಧನಿಗೆ ||

೧೫೨ ತೋರದದು ತೋರದದು ಭಕ್ತಿತೊರೆದವಗೆ |
ದೂರವದು ದೂರವದು ಸಂಶಯಾತ್ಮನಿಗೆ ||
ಸರಿಯುವುದು ಸರಿಯುವುದು ಹಮ್ಮಿರುವವರೆಗೆ |
ದೊರೆಯದದು ದೊರೆಯುದದು ಅತಿಮೊಂಡನರಗೆ ||

೧೫೩ ನರನಲ್ಲ ಹಂಕಾರವಜ್ಞಾನವಿರಲು |
ಮರೆತು ಭ್ರಮದಲ್ಲಿ ಸುಖಿಯೆಂದು ತಿಳಿಯುವೊಲು ॥
ಖೊಟ್ಟಿ ನಾಣ್ಯವನು ನಿಜವೆಂದು ಬಗೆದಂತೆ |
ನಿಷ್ಟೆಯಲಿ ಸತ್ಯವನು ತಿಳಿಯದಿರೆ ಚಿಂತೆ ||

೧೪೪ ಜಗದಲ್ಲಿ ಸತ್ಯರೂಪವನದೆಂತು ನೋಡು ।
ಜಗದೀಶ ಜ್ಯೋತಿಯನ್ನನುಭವಿಸಿ ಪಾಡು ।
ನಿತ್ಯದೀಪರಿ ನಡೆಯುತಿರೆ ದೇವಕಾಣುವನು ।
ಮಿಥ್ಯಭ್ರಮ ಹರಿಯುತಲೆ ಮುಕ್ತನಾಗುವನು ॥

೧೪೫ ಚಿಂತಿಸಲು ವಿಷಯವನು ಪುನರ್ಜನ್ಮವಹುದು ।
ಅಂತೆಯಜ್ಞಾನಹಂಕೃತಿ ಜತೆಗೆ ಬಹುದು ॥
ಮೂಲರೂಪ ಗುರುತಿಸುತ ವಿವೇಕದಲ್ಲಿ ।
ಮೂಲದಲಿ ಸೇರಿಬಿಡೆ ಜನುಮ ಮತ್ತೆಲ್ಲಿ ॥

೧೪೬ ದೃಶ್ಯ ಜಗವಿದನು ಶಾಶ್ವತವೆನಲು ಸಲ್ಲ ।
ನಶ್ವರಕೆ ನಾಶವೆಂದಿಗು ತಪ್ಪಲಿಲ್ಲ ॥
ಕೊನೆಗೆ ಕಾಲನಲಿ ಕಳಿತು ಕಲೆವುದು ನೋಡು ।
ಮನವಿನ್ನನಂತ ಸತ್ಯವ ಹುಡುಕಿ ಹಾಡು ॥

೧೪೭ ಛೇದಿಸಲು ದಹಿಸಲ್ಕೆ ನೆನಯಿಸಲು ಸಿಗನು ।
ಭೇದವಿರೆ ಕಾಣನವ ಸರ್ವವ್ಯಾಪಕನು ॥
ಅನುದಿನವು ನೀನೇಕ ರೂಪನನು ನೋಡು ।
ಮನವಿನ್ನನಂತ ಸತ್ಯವ ಹುಡುಕಿ ಹಾಡು ॥

೧೪೮ ಆಧಾರನಹುದವನು ಮೂರ್ಮೂರ್ತಿಗಳಿಗೆ ।
ವೇದಕ್ಕಗೋಚರ ನಿರಾಕಾರ ಕಣ್ಗೆ ॥
ವನಜನಾಭನೊಳು ಲೀನ ವಿವೇಕಿ ನೋಡು ।
ಮನವಿನ್ನನಂತ ಸತ್ಯವ ಹುಡುಕಿ ಹಾಡು ॥

೧೪೯ ನೋಡಲಿಕೆ ಚರ್ಮಚಕ್ಷುವಿಗವನು ಸಿಗನು ।
ನೋಡೆ ಜ್ಞಾನಾಕ್ಷಿಯೊಳು ನಿರುತ ಗೋಚರನು ॥
ಜನಿಸೆ ಜ್ಞಾನವು ತ್ರಿಪುಟಿಯಳಿಯುವುದು ನೋಡು ।
ಮನವಿನ್ನನಂತ ಸತ್ಯವ ಹುಡುಕಿ ಹಾಡು ॥

ದೃಷ್ಟ, ದೃಶ್ಯ ಮತ್ತು ದರ್ಶನ.

೧೫೦ ಸಿತಪೀತಶ್ಯಾಮಾದಿ ವರ್ಣವಿರಹಿತನು |
ಸತತ ವ್ಯಕ್ತಾವ್ಯಕ್ತಗಳ ಮೀರಿದವನು ||
ಜನುಮ ತಪ್ಪಿಸಬಲ್ಲ ಗುರುಸೇವೆ ಮಾಡು |
ಮನವಿನ್ನನಂತ ಸತ್ಯವ ಹುಡುಕಿ ಹಾಡು ||

೧೫೧ ಆತ್ಮನನು ಹುಡುಕುತಿರಲವ ದೊರೆಯಲೊಲ್ಲ |
ಆತನನು ಕೇಳಿ ತಿಳಿವುದು ಸಾಧ್ಯವಿಲ್ಲ ||
ಸದ್ಗುರುವಿನಾಶ್ರಯುವಿರದೆ ಕಾಣಲೊಲ್ಲ |
ಚಿದ್ಗುರುವು ಕೃಪೆದೋರದಿರೆ ದಾರಿಯಿಲ್ಲ ||

೧೫೨ ತತ್ವವಾದದ ಜಾಣ್ಮೆಯಲಿ ಲಾಭವಿಲ್ಲ |
ಸ್ವತ್ವ ಚಾತುರ್ಯಗಳಿಗವ ಸಿಕ್ಕಲೊಲ್ಲ ||
ನಿರ್ಲಿಪ್ತನನು ಕಾಣಲಾಚಾರ ಬೇಕು |
ನಿರ್ಲೇಪನಾಗೆ ಸತ್ಯದ ಬೋಧಬೇಕು ||

೧೫೩ ಪಿಂಡತತ್ವಜ್ಞಾನದಿಂ ಲಭ್ಯವಲ್ಲ |
ಮೊಂಡ ಮನುಷಗೆ ಶಾಂತತೆಯು ದೊರೆವುದಿಲ್ಲ ||
ಯೋಗಯಾಗವು ತ್ಯಾಗ ಭೋಗ ತರಲಿಲ್ಲ |
ಯೋಗಿಗುರುವನು ಸೇವಿಸದೆ ಶಾಂತಿಯಿಲ್ಲ ||

೧೫೪ ಕಾಣದಿರೆ ಚಂದ್ರಮನು ಬೇರೆಯದರಂತೆ |
ಕಾಣಿಸುತ್ತುಪಮಾನ ವರ್ಣಿಸುವುದಲ್ತೇ ||
ಮಹವಾಕ್ಯ ತತ್ವ ಪಂಚೀಕರಣಗಳನು |
ಇಹದಲ್ಲಿ ಗರುವಚನದಲಿ ತಿಳಿಸುತಿಹನು ||

೧೫೫ ಸ್ಥೂಲದೃಶ್ಯಂಗಳೊಳು ತುಂಬಿದ್ದರಾತ |
ಸ್ಥೂಲಕಂಗಳಿಗೆ ಕಾಣನು ನೋಡೆ ತಾತ ||
ಮ್ಲಾನವದನವು ಬೇಡ ಕಣ್ಣೆದುರಿಗಿಹನು |
ಜ್ಞಾನದೃಷ್ಟಿಗೆ ಮಾತ್ರ ದೇವ ಗೋಚರನು ||

೧೫೬ ತಿಳಿದೆ, ಕಂಡಿಹೆನೆಂದು ಸಾರುವವ ಮೂರ್ಖ |
ತಿಳಿಯಿಸಲತರ್ಕ್ಯನನು ತಲ್ಲಣವು ತರ್ಕ ||
ಹೆಮ್ಮೆ ಭಾವವು ಸೋಂಕಿರಲು ಕಾಣನೆಂದೂ |
ಬ್ರಹ್ಮವನು ಕಾಣೆತ ದ್ರೂಪನೆಂದೆಂದು ||

೧೫೭ ಹುಡುಕುವಗೆ ಶಾಸ್ತ್ರ ಬಹು ವಿಸ್ತಾರವಹುದು |
ದುಡುಕುವವಗೇಕ ವಾಕ್ಯತೆಯಲ್ಲಿ ಸಿಗದು ||
ನಿನಗಹಿತಶಾಸ್ತ್ರಬೋಧ ವಿರೋಧವಾದ |
ಮನದಗತಿ ಕುಂಠಿತವುದಿಸೆಜ್ಞಾನಬೋಧ ||

೧೫೮ ಶ್ರುತಿನ್ಯಾಯಮೀಮಾಂಸಗಳು ತರ್ಕಶಾಸ್ತ್ರ |
ಸ್ಮೃತಿವೇದಗಳ ವರ್ಣನೆಯು ಭಿನ್ನ ಸ್ತೋತ್ರ |
ಶೇಷವರ್ಣಿಸೆ ಸೋತುತಾ ಮೌನನಾದ |
ಕ್ಲೇಶಕರದಹಂಕೃತಿ ಕಳೆದು ತಿಳಿಬೋಧ ||

೧೫೯ ಅಹಮೆಂಬ ನೊಣವನ್ನು ನುಂಗಿರುವ ನರಗೆ |
ಮಹಜ್ಞಾನ ಭೋಜನವು ರುಚಿಪುದೆಂತವಗೆ ||
ಮನನೀನಹಂಕಾರ ಕಿತ್ತಿಸೆವವರೆಗೆ |
ಘನಜ್ಞಾನಭೋಜನವು ಜೀರ್ಣಿಸದು ನಿನಗೆ ||

೧೬೦ ಭೇದವತಿ ಖೇದಕರ ನಿನಗೆಂದು ಬೇಡ |
ವಾದವು ವಿಕಾರಕರವೆಡೆಯಿನಿತುಬೇಡ ||
ನಿನ್ನೊಳಗಹಂಭಾವ ನೆಲೆಸಿರುವವರೆಗೆ |
ಇನ್ನು ಬೇಡುಪದೇಶ ಮಾಡುವುದು ಪರಗೆ ||

೧೬೧ ಅಹಮಿರಲು ನಿನ್ನೊಳಗೆ ದುಃಖಜನಿಸುವುದು |
ಮಹಜ್ಞಾನದುಪದೇಶ ವ್ಯರ್ಥವಾಗುವುದು ||
ಮರೆಯದಲಹಂಕಾರ ಹುಡುಕಿ ಕೀಳುವುದು |
ಬೆರೆತಾತ್ಮರೂಪದಲಿ ಸುಖದಿ ಬಾಳುವುದು ||

೧೬೨ ಜ್ಞಾನಿಗಹವಿರೆನೀತಿ ಪತನವಾಗುವುದು ।
ಮಾನಯುತಗದರೊಳಪಮಾನವಾಗುವುದು ॥
ಸುವಿವೇಕ ನಡೆಯಲಿಕುಂದ ತೋರುವುದು ।
ಅವಿವೇಕಿತಿದ್ದದಿರಲೇನ ಹೇಳುವುದು ॥

೧೬೩ ದೇಹಜೀವಗಳು ಬೇರೆಂಬರಿವಿನಿಂದ ।
ದೇಹದರಿವನು ದಾಟುವುದು ದೂರವೆಂದ ॥
ಸಚ್ಚಿದಾನಂದನೀನಾಗಬೇಕೇನು ।
ನಿಚ್ಚಸಜ್ಜನ ಸಂಗವನು ಮಾಡು ನೀನು ॥

೧೬೪ ಮನವೆ ವಿಷಯದ ಚಿಂತನೆಯು ಬೇಡ ನಿನಗೆ
ಅನುದಿನವು ಸುಖಿಸು ನಿರ್ಗುಣ ರೂಪದೊಳಗೆ ॥
ಹುಚ್ಚುಮದ ಕಲ್ಪನೆಯು ಕಳೆಯಬೇಕೇನು ।
ನಿಚ್ಚಸಜ್ಜನ ಸಂಗವನು ಮಾಡುನೀನು ॥

೧೬೫ ದೇಹ ಸ್ತ್ರೀಧನದ ಚಿಂತನೆಯ ಮಾಡುವವಗೆ ।
ಮೋಹದಲಿ ಜನನಬಂಧವು ತಪ್ಪದವಗೆ ॥
ಅಚ್ಚುತನ ಭಜಿಪಗೊಲಿವಳು ಮುಕ್ತಿ ತಾನು ।
ನಿಚ್ಚ ಸಜ್ಜನಸಂಗವನು ಮಾಡುನೀನು ॥

೧೬೬ ಬಲಿತಿರಲಹಂಕಾರ ಬದ್ಧನವ ಸತ್ಯ ।
ಒಲಿದ ಸ್ತ್ರೀಪುತ್ರಾದಿ ವ್ಯಾಮೋಹ ಮಿಥ್ಯ ॥
ಹೆಚ್ಚುತಿಹ ಭವಚಿಂತೆ ಕಳೆಯಬೇಕೇನು ।
ನಿಚ್ಚ ಸಜ್ಜನಸಂಗವನು ಮಾಡು ನೀನು ॥

೧೬೭ ಸಂದೇಹವನು ಮನವೆ ಕಳೆದು ಬಿಡುಬೇಗ ।
ಮುಂದೆ ನೀಬ್ರಹ್ಮರೂಪೆಂದರಿವುದಾಗ ॥
ಇಚ್ಛೈಸಿ ಕಳೆವ ಕಾಲ ಫಲಿಸಬೇಕೇನು ।
ನಿಚ್ಚಸಜ್ಜನ ಸಂಗವನು ಮಾಡು ನೀನು ॥

೧೭೮ ಗುರುವೃತ್ತಿಗಳನಾತ್ಮದಲಿ ಕರಗಿಸಿಹನು ।
ಸರಿದಿರೆ ದುರಾಶೆಗಳು ದೀನನೇಕವನು ॥
ದೇಹಬುದ್ಧಿಗುಪಾಧಿ ಪ್ರೇಮಕಾರಣವು ।
ಮೋಹ ಕಳೆದ ತಪಸ್ವಿಗಳನು ಬಾಧಿಸವು ॥

೧೭೯ ಗುರುವಿನಿಂದಲನಂತ ಬ್ರಹ್ಮನರಿಯುವುದು ।
ಹರಿಮಾಯೆಯುವನಿಂದ ನಿರಸವಾಗುವುದು ॥
ದೇಹದರಿವನು ದಹಿಸಿ ಧ್ಯಾನಮಾಡುವುದು ।
ಸೋಽಹಮೆನ್ನುತ ನಿರ್ಗುಣನ ನೆನೆಯುತಿಹುದು ॥

೧೮೦ ಜ್ಞಾನದರ್ಶನವು ಸುವಿವೇಕದಿಂದಹುದು ।
ಜ್ಞಾನದರಿವಿಲಿ ದೇಹ ಬುದ್ಧಿ ನಶಿಸುವುದು ॥
ಸ್ಥಿರವಿರದೆ ಮನವೃತ್ತಿ ದೂರಕೋಡುತಿರೆ ।
ತಿರುಗೆಳೆದು ನಿಲಿಸುವುದು ಗೆಲ್ವ ಬಯಕೆಯಿರೆ ॥

೧೮೧ ಸರ್ವಸಾರನು ಬ್ರಹ್ಮಗುಪ್ತನಾಗಿಹನು ।
ಸರ್ವದೃಶ್ಯಗಳಿಗಾಭಾಸ ತೋರುವನು ॥
ಕಲ್ಪನಾತೀತ ನಿರಭಾಸನಿರ್ಗುಣನು ।
ಸ್ವಲ್ಪ ಸಹ ಹಮ್ಮಿರಲು ಸಾಧಕಗು ಸಿಗನು ॥

೧೮೨ ಅಜ್ಞಾನವೇ ನೆಲೆಯು ವಿಷಯ ಕಲ್ಪನೆಗೆ ।
ಸುಜ್ಞಾನವೇ ನೆಲೆಯು ಬ್ರಹ್ಮಕಲ್ಪನೆಗೆ ॥
ಮೂಲಕಲ್ಪನೆಗೆ ತೋರುವುದೆರಡು ರೂಪ ।
ಮೂಲದಲಿ ಲೀನ ಸುಜ್ಞನು ತೊಳೆದು ಪಾಪ ॥

೧೮೩ ಚಿದುವ್ಯೋಮದೊಳಗೆ ದುರಹಂಕಾರ ರಾಹು ।
ಉದಯಿಸಲು ಚಾಚುತಿಹುದಜ್ಞಾನ ಬಾಹು ॥
ದಿಕ್ಕು ತೋಚದು ಕತ್ತಲೆಯು ಹೆಚ್ಚುತಿಹುದು ।
ಸೊಕ್ಕಳಿದ ಮೇಲಲ್ಲಿ ಬ್ರಹ್ಮ ಕಾಣುವುದು ॥

೧೭೪ ಕಣ್ಣಿನಲಿ ಕಾಣಬಯಸಲು ದೇವಸಿಗನು ।
ಬಣ್ಣ ಜಗದಾ"ಗು ಇರು ಹೋಗು"* ಕಾರಣನು ॥
ಅಕ್ಷಯದ ಮೋಕ್ಷ ಕೊಡೆ ದಕ್ಷನಾಗಿಹನು ।
ಪಕ್ಷವಹಿಪನು ಭಕ್ತಪ್ರೇಮದಿಂದವನು ॥

೧೭೫ ವಿಧಿಲೋಕ ನಿರ್ಮಿತಿಗೆ ಮೂಲಕಾರಣನು ।
ವಿಧಿಯ ನಿರ್ಮಿಪನು ಸಹ ಬೇರೊಬ್ಬನಿಹನು ॥
ಹರಪ್ರಲಯದಲಿ ಮೂಲೋಕ ದಹಿಸುವನು ।
ಹರನ ದಹಿಪನು ಕೂಡ ಬೇರೊಬ್ಬನಿಹನು ॥

೧೭೬ ದ್ವಾದಶಾದಿತ್ಯರೇಕಾದಶರು ರೌದ್ರ ।
ವಾದಿಸಲಸಂಖ್ಯಾತರಿಂದ್ರ ದೇವೇಂದ್ರ ॥
ಇವರನಾರನು ಮೂಲದೇವನೆನೆ ಬರದು ।
ಅವನಾರು, ಹೇಗೆ, ತಿಳಿಯಲು ಸುಲಭ ಸಿಗದು ॥

೧೭೭ ಮುರಿಯಲ್ಕೆ ಸುಡಲಿಕ್ಕೆ ನೆನೆಯಿಸಲು ಸಿಗನು ।
ಸ್ಥಿರನಾದರುವೆ ಸರ್ವಶಕ್ತನಾಗಿಹನು ॥
ನೋಡಲಿಕೆ ಚರ್ಮಚಕ್ಷುವಿಗೆಂದು ಸಿಗನು ।
ಮೂಢನಲಿ ಹಮ್ಮಿರಲು ದೂರಸರಿಯುವನು ॥

೧೭೮ ಇಷ್ಟದಲಿ ಭಕ್ತ ಹರಿಪೂಜೆ ಮಾಡುವನು ।
ಇಷ್ಟ ಮೂರ್ತಿಯೊಳಗಾನಂದ ಕಾಣುವನು ॥
ಭಕ್ತಿಗನುಗುಣ ದೇವ ಕೋಟ್ಯಾನುಕೋಟಿ ।
ಭಕ್ತಗೊದಗಿಪನು ಬಹು ಪ್ರೀತಿಯಲಿ ಭೇಟಿ ॥

೧೭೯ ಮೂಲೋಕ ಸೃಷ್ಟಿ ಕಾರಣ ಬ್ರಹ್ಮನಹುದು ।
ಮೂಲಮೂರುತಿ ಮರೆವು ಮೂಢನಿಗೆ ಬಹುದು ॥
ಚರ್ಮಚಕ್ಷುವಿಗಂತು ಗೋಚರಿಸನವನು ।
ಮರ್ಮ ತಿಳಿಸಲು ಗುರುವು ಶೀಘ್ರ ಕಾಣುವನು ॥

---

* ಸೃಷ್ಟಿ, ಸ್ಥಿತಿ, ಲಯ.

೧೮೦ ಬಹು ಕಾಣುವರು ಛದ್ಮ ಗುರುಲೋಕದಲ್ಲಿ ।
ಬಹು ಶಕ್ತಿಯನು ತೋರಿಪರು ಮಂತ್ರದಲ್ಲಿ ॥
ಕಾಮ ತೃಪ್ತಿಗೆ ಚೇಟ ವಿದ್ಯೆ ಹಿಡಿದಿಹರು ।
ಪ್ರೇಮದಾಶ್ರಯ ವ್ಯರ್ಥ ಮುಕ್ತಿಯನು ಕೊಡರು ।

೧೮೧ ಮೋಸಗಾರನು ಲೋಭಿ ಕ್ರೂರ ಚೇಟಕಿಯು ।
ಹೇಸದಿಹ ಹಿಂಸಕಿಯು, ಹೀನ ಮತ್ಸರಿಯು ॥
ಹಾನಿಕರ, ಮತ್ತ, ವ್ಯಸನಿಯು, ಛದ್ಮಗುರುವು ।
ಜ್ಞಾನಿಯು ಪರಂಪಾರ ಮಹಿಮ ಸದ್ಗುರುವು ॥

೧೮೨ ಕಾಮಿ ಮನದಲಿ, ತನ್ನ ಹೊಗಳಿಕೊಳ್ಳುವನು ।
ನೇಮವಿಲ್ಲದೆ ನುಡಿಯೆ ಛದ್ಮ ಗುರುವವನು ॥
ಮಾತು ಮನದಂತೆಯೇ ನಡೆಯುತಿರೆ ಧನ್ಯ ।
ನೀತಿಯಿರಲವನೆ ತಿಳಿಸದ್ಗುರುವು ಗಣ್ಯ ॥

೧೮೩ ಸದ್ಗುರುವು ಜ್ಞಾನಿ, ಭಕ್ತ, ವಿವೇಕಿ, ತ್ಯಾಗಿ ।
ಚಿದ್ಗುಣಿಯು ಕ್ಷಮೆ, ಶಾಂತಿ, ದಯೆಯಿರಲು ಯೋಗಿ ॥
ಶಾಸ್ತ್ರಶೀಲನು ಶೂರಸಮ ಪ್ರೇಮಯುತನು ।
ಆಶ್ರಯದ ಭಕ್ತನಿಗೆ ಶಾಂತಿದಾಯಕನು ॥

೧೮೪ ನಿರ್ವಿಕಾರನು ಬ್ರಹ್ಮರೂಪ ವಿರಹಿತನು ।
ಸರ್ವಬೋಧವನು ಗುರು ಸುಲಭ ತಿಳಿಸುವನು ॥
ನುಡಿಬಿಟ್ಟರ ನಿರ್ವಾಚ್ಯನ ತಿಳಿವುದೆಂತು ।
ಬಿಡದೆ ಗುರುಬೋಧವ ಮನನ ಮಾಡೆ ಬಂತು ॥

೧೮೫ ಅಂತು ಮತಿಲೀನವಾಗಲಿ ರಾಮನಲ್ಲಿ ।
ಚಿಂತೆ ಭಯಗಳ ಮಾರ್ದ ನಿಜರೂಪದಲ್ಲಿ ॥
ನೋಡಲಿಕದೃಶ್ಯವೆಂಬೀ ಮಾತು ಸತ್ಯ ।
ಕೂಡಿ ಹೋಗಲು ಬಿನ್ನಭಾವವೇ ಮಿಥ್ಯ ॥

೧೮೬ ಚಿನ್ಮಯನು ಸರ್ವಜನ ಸನ್ನಿಧಿಯಲಿಹನು ।
ಸನ್ಮನವೆ ಹುಡುಕಿ ತಿಳಿನೀನು ಸತ್ಯವನು ॥
ಸಿರಿಯಕಾಂತನ ಭೇಟಿಯು ಖಂಡವಾಗಿಹುದು ।
ವರದರ್ಶನಕೆ ಹಮ್ಮು ಪರದೆಯಂತಿಹುದು ॥

೧೮೭ ಭೂತ ಬ್ರಹ್ಮಾಂಡ ಪಿಂಡಗಳವನಲೈಕ್ಯ ।
ಆತನೇದಿಗು ಲಿಪ್ತನಾಗುವುದ ಶಕ್ಯ ॥
ಕಂಗೊಳಿಪ ಭೂತವಿಸ್ತರವೆಲ್ಲ ಽ ಸತ್ಯ ॥
ಸಂಗಸರ್ವಸರಿಸಿ ಬಿಡಲು ಸುಖವಗತ್ಯ ॥

೧೮೮ ದೇಹಭಾನುವನು ಕಳೆ ಜ್ಞಾನಮಾರ್ಗದಲಿ ।
ದೇಹ ಮರೆಯುತ ಚರಿಸು ಭಕ್ತಿ ಮಾರ್ಗದಲಿ ॥
ಭಂಗಪಡೆ ನಿಂದ್ಯೆಯು ವಿರಾಗದಲಿ ಸ್ತುತ್ಯ ।
ಸಂಗಸರ್ವ ಸರಿಸಿಬಿಡಲು ಸುಖವಗತ್ಯ ॥

೧೮೯ ಸೃಷ್ಟಿಕಾರಣನ ಬಿಡದಂತೆ ಗುರುತಿಪುದು ।
ಇಷ್ಟನನು ಕಾಣುತಲೆ ಮೋಕ್ಷ ಸಿಕ್ಕುವುದು ॥
ತುಂಗಗುಣಿ ನಿರ್ಗುಣಿಯು ತಿಳಿಯುವಗೆ ಸತ್ಯ ।
ಸಂಗಸರ್ವ ಸರಿಸಿಬಿಡಲು ಸುಖವಗತ್ಯ ॥

೧೯೦ ಸೃಷ್ಟಿಮಾಡುವನಲ್ಲ ರಕ್ಷಿಸುವನಲ್ಲ ।
ಅಷ್ಟುಮಾಯಾತೀತ ಲೇಪವೇನಿಲ್ಲ ॥
ತುಂಗಗುಣಿಯೊಲಿಯುವನು ನೆನೆಯುವಗೆ ನಿತ್ಯ ।
ಸಂಗಸರ್ವ ಸರಿಸಿಬಿಡಲು ಸುಖವಗತ್ಯ ॥

೧೯೧ ದೇಹಾತ್ಮ ಬುದ್ಧಿ ದೃಢವಾಗಿ ನೆಲೆಸಿದಗೆ ।
ಮೋಹಹರಿಯದು ಕಲ್ಪಕಳೆದರುವೆ ಅವಗೆ ॥
ಬ್ರಹ್ಮಕಾಣನ ಹಂಕೃತಿಯು ಬಿಡುವತನಕ ।
ಸುಮ್ಮನ ಜ್ಞಾನವುಳಿವುದು ಕೊನೆಯತನಕ ॥

೧೯೨ ಧ್ಯಾನಿಸೆ ನಿರಾಕಾರ ಕಷ್ಟವಾಗಿರಲು ।
ಧ್ಯಾನಸಾಕಾರವೇಕಾಗ್ರ ಸಾಧಿಸಲು ॥
ಅವನ ವರ್ಣಿಸಲಿಕುಪಮಾನ ಸಿಗಲಿಲ್ಲ ।
ಅವನಾಗೊಲಿವ ಹಮ್ಮು ಕಳೆದವರಿಗೆಲ್ಲ ॥

೧೯೩ ಪೂರ್ಣಬ್ರಹ್ಮನ ತಿಳಿವ ಬಗೆ ಕಾಣಲಿಲ್ಲ ।
ಪೂರ್ಣ ವರ್ಣಿಸಲು ವೇದಕೆ ನಿಲುಕಲಿಲ್ಲ ॥
ಗೋಚರಾಗೋಚರದ ಗೋಷ್ಟಿಗೂ ಸಿಗನು ।
ಗೋಚರಿಸಲಿಲ್ಲವಲೆ! ಶ್ರುತಿ ವಾಕ್ಯಕವನು ॥

೧೯೪ ಪೇಳು ಹೃದಯದ ದೇವನಾರು ರೂಪೆಂತು ।
ಕೇಳುವನು ಸಾಧಕನು ಗುರುವರನೊಳಿಂತು ॥
ದೇಹಪಾತನದ ಮೇಲವನಿರುವದೆಂತು ।
ದೇಹವನು ಮರಳಿ ಧರಿಸುವ ಬಗೆಯದೆಂತು ॥

೧೯೫ ಇಭರಾಜವರದನನು ತಿಳಿವ ಬಗೆಯಿಂತು ।
ನಭದಂತೆ ಸರ್ವೆಡೆಗೆ ವ್ಯಾಪ್ತನವನಂತು ॥
ಎಲ್ಲೆಡೆಗೆ ತುಂಬಿಹನು "ಬರಹೋಗು" ಸಲ್ಲ ।
ಎಲ್ಲಿಯೂ ಅವನಿರದ ಸ್ಥಳಸಿಗುವುದಿಲ್ಲ ॥

೧೮೬ ಆಕಾಶದಲಿ ಸೂಕ್ಷ್ಮ ರೇಣುವಿಲಿ ನೋಡು ।
ಸಾಕಾರರೂಪದಣು ದೇಹದಲಿ ಪಾಡು ॥
ಧ್ಯಾನಿಸುತ ನೋಡುವವನಾತನಲ್ಲೈಕ್ಯ ।
ಧ್ಯಾನ, ಧ್ಯಾತಾ, ಧ್ಯೇಯವುಳಿಯುವುದಶಕ್ಯ ॥

೧೯೭ ಆಕಾಶದಂತಿರುವನೆಲ್ಲೆಡೆಯುಮೀಶ ।
ಸಾಕಾರ ಭಜನೆಯಲಿ ಭವಬಂಧ ನಾಶ ॥
ಅವನ ಕಾಣಲು ದೇಹಬುದ್ಧಿಯಿರಲೊಲ್ಲ ।
ಅವನ ದರ್ಶನ ಮನಕೆ ಸಾಕೆಂಬುದಿಲ್ಲ ।

೧೯೮ ವ್ಯೋಮವು ಸರ್ವವ್ಯಾಪಿಯೆಂಬುದಿದು ಸತ್ಯ।
ರಾಮಗೀ ಉಪಮಾನ ಹೇಳುವುದು ಮಿಥ್ಯ ॥
ಆತನಿಲ್ಲದ ವಸ್ತು ಬೇರೆ ಸಿಗಲಿಲ್ಲ।
ಆತನಿಗೆ ವ್ಯಾಪಕನು ಎಂಬುವುದೆ ಸಲ್ಲ ॥

೧೯೯ ಪರಮಾತ್ಮ ರೂಪವ್ಯಾಪ್ತಿಗೆ ಮೇರೆಯಿಲ್ಲ।
ಅರಿಯುಬೇಕೆನೆ ತರ್ಕದಲಿ ಸಾಧ್ಯವಿಲ್ಲ ॥
ಕೃಪೆದೋರೆ ಸದ್ಗುರುವು ತಕ್ಷಣವೆ ನರಗೆ।
ವಿಪುಲ ಮಹಿಮನ ದರ್ಶನವು ಲಭಿಸುದವಗೆ ॥

೨೦೦ ಗುರುವಿಂದರೂಪದರ್ಶನವಾಗಲವನು।
ತುರಿಯ ಸ್ಥಿತಿಯಲಿ ಸರ್ವಸಾಕ್ಷಿಯಂತಿಹನು ॥
ತನ್ಮಯನ ವರ್ಣಿಸಲು ಶಬ್ದ ಕುಂಠಿತವು।
ಉನ್ಮನಗೆ ಕಾಣುವುದು ಜಗ ರಾಮಮಯವು ॥

೨೦೧ ಜಗದಿ ರಾಮನ ಹೊರತು ಬೇರೆ ಕಾಣಿಸದು।
ಸುಗಮ ದ್ವೈತದ ಭಾವವಳಿಸಿ ಹೋಗುವುದು ॥
ಶಾಂತಿಯಲಿ ದೀಪ್ತಮನ ಸತತ ಶೀತಲವು।
ಶಾಂತ ವೈದೇಹ ಸ್ಥಿತಿಯಾನಂದ ಕರವು ॥

೨೦೨ ಮನವೆ ಬ್ರಹ್ಮದರ್ಶನವಾದ ಮೇಲ್ನೀನು।
ಅನುದಿನದ ಮನನ ಧ್ಯಾನವ ಬಿಡುವೆಯೇನು ॥
ವರಬೋಧ ಶ್ರವಣ ಬಿಡದಂತೆ ಮಾಡುವುದು।
ಗುರುವರನ ಸಂಗದಲಿ ಧನ್ಯನಾಗುವುದು ॥

೨೦೩ ಬಿಟ್ಟುಬಿಡು ಸರ್ವ ಜಗಸಂಗವನು ನೀನು।
ಇಷ್ಟದಲಿ ಸತ್ಸಂಗ ಗಳಿಸೆ ಮತ್ತೇನು ॥
ಸಜ್ಜನರ ಸಂಗದಲಿ ಭವದುಃಖನಾಶ।
ಸಜ್ಜನಲಿ ಸನ್ಮಾರ್ಗ ಸುಖಕರದ ವಾಸ ॥

೨೦೪ ತುಂಗಗುಣಿ ಗುರುಸೇವೆ ಮೋಕ್ಷದಾಯಕವು |
ಸಂಗಮೋಚನೆಯು ಬಹು ಲಾಭದಾಯಕವು ||
ಹಿಂಗುವುದು ಭವಬಂಧ ಸುಲಭಸಾಧಕಗೆ |
ಕಂಗೊಳಿಪ ದ್ವೈತಮತಿ ನಿರ್ಮೂಲವವಗೆ ||

೨೦೫ ಕೇಳಲು ಮನೋಪದೇಶವ ದೋಷಮುಕ್ತಿ ।
ಕೇಳಿ ಮೂಢಗೆ ಸಾಧನವ ಮಾಡೆ ಶಕ್ತಿ ॥
ದೊರೆಯುವುದು ಜ್ಞಾನಭಕ್ತಿವಿರಾಗವಾಗ ।
ಸರಿದು ಕಾಮವು ಲಭ್ಯ ಮುಕ್ತಿ ಸುಖಭೋಗ ||

'ಅಂತರಂಗ' ಪುಸ್ತಕ ಪತ್ರಿಕೆಯ ಪ್ರಕಟಣೆಗಳು

ಬಿರುದಾವಳಿ [ಎಂ. ವಿ. ಹೆಗ್ಡೆ]	0	3	0
ಹೈದರಾಬಾದ್ ವಿಜಯ ,, [ಯಕ್ಷಗಾನ]	0	4	0
ಗಾದೆಯ ಗಾಂಧಿ [ಸೂಕ್ತ ಪರಿಚಯ]ಎಂ ವಿ ಹೆಗ್ಡೆ	0	3	0
ಶಾಂತಿಯ ಮಡಲಿನಲ್ಲಿ[ನೀಳ್ಗತೆ] ಪ. ಸು ಭಟ್ಟ	0	3	0
ಬಲಿಪೀಠದಲ್ಲಿ [ನಾಟಕ] ಆರ್. ಕಲ್ಯಾಣಮ್ಮ	0	5	0
ಅಗಲಿದ ಅಕ್ಕ ಸರೋಜಿನಿ [ಎಂ ವಿ ಹೆಗ್ಡೆ]	0	3	0
ನನ್ನ ಹೆಂಡತಿ[ಕತೆಗಳು]ಮಾಳಕೋಡ ನಾರಾಯಣ ಹೆಗಡೆ	0	3	0
ಪುಣ್ಯಫಲ [ನೀಳ್ಗತೆ] ಗಿರಿಬಾಲೆ	0	4	0
ಸುಖದದಾರಿ [ವೈರಾಗ್ಯಶತಕ] ಕೆ ಎ ದೇವದಾಸ	0	3	0
ಸುಕಾಂತ [ಅನುವಾದಿತ ಕತೆ] ವೀ. ಚ- ಹಿತ್ತಲಮನಿ	0	3	0
ಪಂಚಮುಖಿ [5 ಪ್ರಬಂಧಗಳು] ಬಿ. ಎಚ್. ಶ್ರೀಧರ	0	4	0
ಜಾತೀಭೂತಕ್ಕೆ ಬಲಿ [ನೀಳ್ಗತೆ] ಕೆ. ದೇವಕಿ	0	3	0
ಜನಸೇವೆಯ ಸೋಗಿನಲ್ಲಿ! [ಕತೆ] ಕೆ. ಶಿವರಾಮ ಶೆಟ್ಟಿ	0	3	0
ನಾ ಕಂಡ ಅವಳು [ಕತೆ] ಶ್ರೀಪತಿ	0	3	0
ತ್ರಿವೇಣಿ [ಪ್ರಬಂಧಗಳ ಸಂಗ್ರಹ]	0	3	0
ನಿಲುವಂಗಿ [ಕತೆ ಎಸ್.ಸುಬ್ಬರಾಮಯ್ಯ, ಬಿ ಎ.(ಆನರ್ಸ್)	0	4	0
ಬಾಡಿಗೆಯ ಮನೆ ಮತ್ತು ಮುಸುಕು [ನಾಟಕಗಳು]	0	3	0
ವರ್ತಮಾನ ಕಾಲದ ನಾಲ್ವರು ಮಹಾನುಭಾವರು	0	4	0
ದೇವರ ನಾಮ ಮತ್ತು ಅದರ ಸಾಧನೆ [ಬಿ. ವಿ. ಶರ್ಮ]	0	3	0
ಎರಡುಕತೆಗಳು(ಪದ್ಮನಾಭ ಉಡ್ಪ ಮತ್ತು ಆಲೂರು ಕೃಷ್ಣ)	0	3	0
ಸರಸ-ವಿರಸ![೪ ವಿನೋದ ಚಿತ್ರಗಳು]ಅ ಗೌ.ಕಿನ್ನಿಗೋಳಿ	0	3	0
ಹೃದಯೇಶ್ವರಿ [ಕಾದಂಬರಿ] ಪ್ರೇಮಚಂದ್ರ	0	4	0
ವಿವಿಧ ವಿಷಯ ಕೋಶ ಭಾಗ ೧, ೨	0	6	0
ನುಡಿ ಮುತ್ತುಗಳು [ಎಂ. ವಿ. ಹೆಗ್ಡೆ] ಮಾಲೆ ೧, ೨, ೩	0	12	0
ಕುಲವಿಲ್ಲದ ಹೆಣ್ಣು[ಪಿ.ವೆಂಕೋಬಾಚಾರ್ಯ ಬಿ.ಎ.,ಬಿ.ಟಿ.]	1	8	0
ತವರು ಮನೆಯಿಂದ [ಸೌ ಶಾರದಾ ದೇವಿ]	0	4	0
ಭಾಗ್ಯ ಲಕ್ಷ್ಮಿ [ನಾಟಕ] ಬೆಳ್ತಂಗಡಿ ಲಕ್ಷ್ಮಣರಾವ್	1	4	0
ಯುಗವಾಣಿ [ಕವನ ಸಂಗ್ರಹ] ಕು. ಶಿ. ಹರಿದಾಸಭಟ್ಟ	0	8	0
ಸ್ತ್ರೀ ಹೃದಯ— [ವಾಸಂತಿ ಪಡುಕೋಣೆ]	0	4	0
ದ್ವೇಷ- [ಶ್ರೀನಿವಾಸಮೂರ್ತಿ ಗೊರೂರು]	0	3	0
ಎರಡು ಏಕಾಂಕ ನಾಟಕಗಳು [ಎಸ್ ವೆಂಕಟರಾಜ]	0	4	0
ಪ್ರಜಾಪ್ರಭುತ್ವವನ್ನು ಕುರಿತು ೧,೨[ಶಿವರಾಮ ಕಾರಂತರು]	0	೮	0
ಕಲಾವಿದನ ದಿನಚರಿ [ಎಸ್ಸೆಲ್]	0	3	0

ಆಧುನಿಕ ಭಾರತ [ಹುರುಳಿ ಭೀಮರಾವ್]	0	4	0
ಕಾಲವೇ ಬದಲಾಗಿದೆ [ಕು ಶಿ ಹರಿದಾಸ ಭಟ್]	0	4	0
ಭಾರತದ ಸಾಹಿತ್ಯ ಮತ್ತು ಕಲೆಗಳು [ವಿಘ್ನೇಶ್ವರ ಶರ್ಮ]	0	4	0
ಸ್ತ್ರೀ ಸ್ವಾತಂತ್ರ್ಯ ಬೇಕೆ? [ವೈದ್ಯ ವಿನಾಯಕರಾವ್]	0	4	0
ಹಂಬಲ [ಕೃಷ್ಣಮೂರ್ತಿ ಕಿತ್ತೂರ]	0	4	0
ಭಾರತ ಚಿತ್ರದ ಅಂಚೆಚೀಟುಗಳು [ಟಿ. ಚಂದ್ರರಾಜ ಸೆಟ್ಟಿ]	0	3	0
ತ್ರಿಶೂಲ [ನಾಟಕ] ವಸುದೇವ್ ಭೂಪಾಲಂ	0	5	0
ಪುಸ್ತಕ ಪುರಾಣ [ಕು.ಶಿ ಹರಿದಾಸಭಟ್ಟ, ಬಿ ಎ (ಆನರ್ಸ್)]	0	4	0
ಹಳ್ಳಿಯಲ್ಲಿ ನಡೆದ ನಾಟಕ [ಕೆ ಎ. ದೇವದಾಸ,]	0	3	0
ನೆರೆಯ ಗಾಂಧಾರ [ಸುಬ್ರಾವ್ ಕೃಷ್ಣ ಹೆಗಡೆ]	0	3	0
ನೂತಿನಯುಗದ ಮಹಾ ಪ್ರಭಾವ [ವಿಘ್ನೇಶ್ವರ ಶರ್ಮ]	0	3	0
ವಿಜ್ಞಾನದ ಬೆಳವಣಿಗೆ [ಟಿ. ಚಂದ್ರರಾಜ ಸೆಟ್ಟಿ]	0	4	0
ಡಾ| ಹರ್ಡೀಕರ್ [ನಾಗೇಶ ರಾಮಚಂದ್ರ ದೇಸಾಯಿ]	0	5	0
ತೆಂಗಿನ ತವರು [ಮು ನಾರಾಯಣಭಟ್ಟ, ಕಾನಗೋಡು]	0	6	0
ಪ್ರಾಯಶ್ಚಿತ್ತ [ಎಂ ಗೋವಿಂದರಾವ್, ಎಂ ಎ]	0	3	0
ಪ್ರಭಾ [ಕು. ಪದ್ಮಾ ಉಡುಪಿ]	0	3	0
ಶವಗಳ ಸಾಗಾಟ [ಪತ್ತೆದಾರಿ] ಸುಬ್ರಾವ್ ಕೃಷ್ಣ ಹೆಗಡೆ	0	12	0
ಸ್ವಪ್ನಲೋಕ [ಕಾರ್ತಿಕೇಯ]	0	6	0
ಮನೆಯ ಹೊರಗಿನ ಮಹಾಜೀವಗಳು [ಕು ಶಿ ಭಟ್ಟ]	0	5	0
ಘಂಟಮಾರಾ [ಕು. ಶಿ. ಹರಿದಾಸ ಭಟ್ಟ] ೪ಭಾಗಗಳು	2	0	0
ಮೂರ್ಖಾಟ [ಡಾ। ಕೃಷ್ಣ]	0	4	0
ಭಾರತದ ರಾಷ್ಟ್ರಗೀತೆ [ಟಿ. ಚಂದ್ರರಾಜ ಶೆಟ್ಟಿ]	0	3	0
ನಮ್ಮ ಬಹು ದೊಡ್ಡ ಶತ್ರು [ಶಿವರಾಮ ಶೆಟ್ಟಿ]	0	4	0
ಕೈಲಾಸ [ಟಿ. ಚಂದ್ರರಾಜ ಶೆಟ್ಟಿ]	0	3	0
ಜ್ಯೋತಿ [2 ನಾಟಕಗಳು]	0	4	0
ಕತ್ತು ಕೊಯ್ದವರಾರು? [ಪತ್ತೆದಾರಿ]	0	5	0
ಸಮಾಜದ ಅಗ್ನಿಕುಂಡ [ವಸಂತಿ ಬ್ಯಾ ಪಡುಕೋಣೆ]	0	4	0
ಬೆಳ್ಳಿ ಹಬ್ಬ	0	4	0
ಉಷಾ [ಕುಮಾರಿ ಪದ್ಮಾ, ಉಡುಪಿ]	0	4	0
ವಿಧಿಲೀಲೆ [ಮೈಲಾರರಾವ್, ಚಿಕ್ಕಮಗಳೂರು]	0	4	0
ಪರಮಾಣು ಪ್ರಪಂಚ [ಕೆ ಗುರುರಾಜ ಉಡುಪ, B SC]	0	4	0
ನೀತಿ ವಿನೋದ ಕತೆಗಳು	0	12	0
ಸಾಹಸಭೀಮ ವಿಜಯ (ಕೆ. ಪಿ ವೆಂಕಪ್ಪ ಶೆಟ್ಟಿ)	0	8	0
ಭಾರತದ ಗುರುಕುಲ ,,	0	6	0
ಲತ್ತೆಪಗಡೆ ,,	0	6	0
ಭರತೇಶ ದಿಗ್ವಿಜಯ ,,	0	8	0

— 'ಕಿರಿಯರ ಪ್ರಪಂಚ'ದ ಪ್ರಕಟಣೆಗಳು —

ಸ್ವತಂತ್ರ ಜೀವನೋಪಾಯ (ಕೆ. ಹೊನ್ನಯ್ಯ ಶೆಟ್ಟಿ)	0	3	0
ಸಂಶಯ ಪಿಶಾಚಿ (ಕೆ ಕೆ ಶೆಟ್ಟಿ) ನಾಟಕ	0	10	0
ನಾಡ ಕತೆಗಳು (ಸಂಕಲನ)	0	4	0
ಕುಶಲವ (ಕೆ ಕೆ ಶೆಟ್ಟಿ) ನಾಟಕ	0	7	0
ಕಾವ್ಯ ಸಾಮ್ರಾಜ್ಯ (ಕವಿತಾ ಸಂಗ್ರಹ)	1	8	0
ಮಧುವನ (ಕತಾಸಂಗ್ರಹ)	3	0	0
ಮುಂದಿನ ದೇವರು (ಕೆ. ಕೆ. ಶೆಟ್ಟಿ) ಪ್ರಬಂಧ	0	4	0
ವ್ಯಭಿಚಾರಿಣಿ ಯಾರು (,,) ನಾಟಕ	1	4	0
ಹೆಂಡ್ತಿ ಗಂಡನಾದರೆ (,,) ಪ್ರಹಸನ	0	4	0
ಪುರುಷ ವಧು (,,) ,,	0	4	0
ಸನ್ಯಾಸಿಯ ಸೋಗಿನಲ್ಲಿ (,,) ಕಾದಂಬರಿ	0	10	0
ನಂದಾ ದೀಪ (ಕೊರಡ್ಕಲ್ ಶ್ರೀನಿವಾಸ ರಾವ್)	1	0	0
ದೇಶಭಕ್ತ (ಕೆ. ಕೆ. ಸೆಟ್ಟಿ) ನಾಟಕ	1	4	0
ಪ್ರೇಮ ವಿಜಯ (,,) ನಾಟಕ	1	0	0
ಭಾರತೀಯ ಕತೆಗಳು (ಕೊರಡ್ಕಲ್ ಶ್ರೀನಿವಾಸರಾವ್)	1	4	0
ಪ್ರಕಾಶ (ಸರಸ್ವತಿ ಬಾಯಿ ರಾಜವಾಡೆ) ನಾಟಕ	2	8	0
ಮೂರು ಪ್ರಹಸನಗಳು (ಕೊರಡ್ಕಲ್ ಶ್ರೀನಿವಾಸರಾವ್)	1	0	0
ನಗೆ ನೋಟಗಳು (ಕೆ ವಿಟ್ಠಲ ಶೆಣೈ) ಕತೆಗಳು	1	0	0
ಅನ್ನದೇವರು ಮತ್ತು ಇತರ ಕತೆಗಳು (ಕಿಂಞಣ್ಣ ರೈ)	1	0	0
ಭಾರತದಲ್ಲಿ ಜಾತಿಭೇದ (ಎಸ್. ಎಲ್ ಸುಬ್ರಹ್ಮಣ್ಯಂ)	1	0	0
ವಿಷ್ಣುವಿನ ದಶಾಪರಾಧಗಳು ಅರ್ಥಾತ್ ದಶಾವತಾರಗಳು (ಎಂ. ವಿ. ಹೆಗ್ಡೆ)	0	12	0
ಆಕಾಶಗಂಗೆ (ಎಸ್. ವೆಂಕಟರಾಜ) ಕತೆಗಳು	2	0	0
ಸ್ವಾತಂತ್ರ್ಯವೀರ ಸಾವರಕರರು (ಇಂದಿರಾಬಾಯಿ)	1	4	0
ಜೀವನ ಸಂಗ್ರಾಮ (ಪಿ ಶೀನ ಶೆಟ್ಟಿ) ನಾಟಕ	1	8	0
ಕದಂಬ (ಕಥಾಗುಚ್ಛ) ಸರಸ್ವತಿ ಬಾಯಿ ರಾಜವಾಡೆ	1	4	0
ಕವಿತಾಕಾಮಿನಿ–ಭಾಗ೧ (ಕವಿತೆಗಳು) ಎಸ್ ವೆಂಕಟರಾಜ	2	0	0
ಸ್ವರಾಜ್ಯ ವಿಜಯ (ಪದ್ಯ–ಅರ್ಥ ಸಹಿತ ಯಕ್ಷಗಾನ)	0	8	0
ಸಪ್ತಸಾಗರ (ಏಳು ಕತೆಗಳು) ಎಸ್ ವೆಂಕಟರಾಜ	0	12	0
ಜಮೀನ್ದಾರ (ಕಾದಂಬರಿ) ಹೊಸಮನೆ ಗುಡ್ಡಪ್ಪ	1	12	0

ನವಭಾರತ ಪುಸ್ತಕ ಭಂಡಾರ, ಉಡುಪಿ.

ನವಭಾರತ ಪುಸ್ತಕ ಭಂಡಾರ, ಉಡುಪಿ

ನಮ್ಮಲ್ಲಿ ಸಿಗುವ ಕೆಲವು ಪುಸ್ತಕಗಳು

[illegible]	1	0	0
[illegible]	1	8	0
[illegible]	0	4	0
[illegible]	0	6	0
[illegible]	0	8	0
[illegible]	0	8	0
[illegible]	0	8	0
[illegible]	0	2	0
[illegible]	0	12	0
[illegible]	0	8	0
[illegible]	0	2	0
[illegible]	0	10	0
[illegible] (,,)	0	12	0
[illegible]	2	0	0
[illegible]	0	2	0
[illegible]	0	2	0
[illegible]	0	12	0
[illegible]	0	12	0
[illegible]	1	0	0
[illegible]	1	8	0
[illegible]	0	8	0
[illegible]	0	8	0
Aliyasanthana Act	0	8	0
[illegible]	0	4	0
[illegible]	0	4	0
[illegible]	0	3	0
[illegible]	0	2	0
[illegible]	0	1	6

[illegible]

ನ...
ಸೇನಪಿಗಾಗಿ
...ದಲ್ಲಿ

ಪುಸ್ತಕಗಳು

'ಜಗತ್ತಿನ ಜ್ಞಾನವು ಪುಸ್ತಕದಲ್ಲಡಗಿದೆ'
— ಅಸ್ಸನ್ ಫಿಲಿಪ್ಸ್.

'ಪುಸ್ತಕಾಲಯವೇ ವಿಶ್ವವಿದ್ಯಾಲಯ'
— ಅರಸ್ತೋ.

'ಪುಸ್ತಕದ ಹುಚ್ಚೇ ಮುಕ್ತಿಯ ಮಾರ್ಗವಾಗಿದೆ'
— ಸುಕ್ರಾತ.

'ಪುಸ್ತಕವಿಲ್ಲದ ಮನೆಯು ಸ್ಮಶಾನ ಸದೃಶವಾದುದು'
— ಸ್ವಾಮಿ ರಾಮತೀರ್ಥ.

'ಓದುವ ಅಭ್ಯಾಸವುಳ್ಳವರಿಗೆ ಲಕ್ಷ್ಮಿಯು ಸುಖವೆಷ್ಟರದು?'
— ಎಮರ್ಸನ್.

'ಶಾಂತಿಗಾಗಿ ಒದ್ದಾಡಿ ಕೊನೆಗದು ಸಿಕ್ಕಿದ್ದು ಪುಸ್ತಕದ ಮೂಲೆಯಲ್ಲಿ'
— ಚಾಣಕ್ಯ.

'ಮೈಮೇಲೆ ಹರಕು ಬಟ್ಟೆಯಿದ್ದರೂ ಚಿಂತಿಲ್ಲ; ಕೈಯಲ್ಲೊಂದು ಒಳ್ಳೆಯ ಪುಸ್ತಕವಿರಲಿ'
— ಬಂಕಿಂಚಂದ್ರ.

'ಪುಸ್ತಕಗಳಿರುವ ಮನೆಯು ಜಡ ವಸ್ತುಗಳೂ ಜೀವಕಳೆಯಿಂದ ತುಂಬಿರುತ್ತವೆ'
— ಮಾರ್ಸಿಡನ್.

'ಪುಸ್ತಕಗಳು ತುಂಬಿದ ಕಪಾಟುಗಳಿಂದ ಕೋಣೆಯ ಸೌಂದರ್ಯವು ಇಮ್ಮಡಿಯಾಗುವುದು'
— ಲೋಕಮಾನ್ಯ ತಿಲಕ.

☞ ನಿಮಗೆ ಯಾವ ಪುಸ್ತಕಬೇಕಾದರೂ ಮೊದಲು ನಮ್ಮೊಡನೆ ವಿಚಾರಿಸಿರಿ.

ನವಭಾರತ ಪುಸ್ತಕ ಭಂಡಾರ

(ರಿಜಿಸ್ಟರ್ಡ್ ಪಬ್ಲಿಷರ್ಸ್ ಎಂಡ್ ಬುಕ್ ಸೆಲ್ಲರ್ಸ್)
ಉಡುಪಿ, ದ. ಕನ್ನಡ.

Edited Printed & Published by K. H. Shetty
at Navayuga Press Udipi